ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಜನವರಿ 27, 2021

ಸಂಪುಟ : 47 ಸಂಚಿಕೆ : 268 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com

## ಕೆಂಪು ಕೋಟೆ ಮೇಲೆ ಸಿಖ್ ಧ್ವಜ, ದೇಶದ ಗೌರವಕ್ಕೆ ಪ್ರತಿಭಟನಾಕಾರರ ಮಸಿ

# ಹಿಂಸಾಚಾರಕ್ಕೆ ತಿರುಗಿದ ಟ್ರ್ಯಾಕ್ಟರ್ ಪರೇಡ್

**ನವದೆಹಲಿ, ಜ. 26 - ದೆಹಲಿಯ ಪ್ರತಿಭಟನಾ ನಿರತ ರೈತರು ಟ್ರ್ಯಾಕ್ಟರ್ ಪರೇಡ್ ವೇಳೆ ಇಡೀ ದೆಹಲಿಯನ್ನು ಅರಾಜಕಗೊಳಿಸಿದ್ದಷ್ಟೇ ಅಲ್ಲದೇ, ರಾಷ್ಟ್ರಧ್ವಜದ ಉನ್ನತ ಪೀಠವಾದ ಕೆಂಪು ಕೋಟೆಯ ಮೇಲೆ ಸಿಖ್ ಧರ್ಮದ ಬಾವುಟ ಹಾರಿಸಿ ದೇಶದ ಗೌರವಕ್ಕೆ ಮಸಿ ಬಳಿದಿದ್ದಾರೆ.**

ಮಂಗಳವಾರ ನಡೆದ ಟ್ರ್ಯಾಕ್ಟರ್ ಪರೇಡ್ ವೇಳೆ ಪ್ರತಿಭಟನಾಕಾರರು ಪೊಲೀಸರು ಅಳವಡಿಸಿದ್ದ ಬ್ಯಾರಿಕೇಡ್ ಕಿತ್ತೆಸೆದಿದ್ದಾರೆ, ಪೊಲೀಸರ ಜೊತೆ ಸಂಘರ್ಷ ನಡೆಸಿದ್ದಾರೆ ಹಾಗೂ ವಾಹನಗಳನ್ನು ಉರುಳಿಸಿದ್ದಾರೆ. ಸಾವಿರಾರು ಜನರು ಹಲವಾರು ಕಡೆ ಪೊಲೀಸರ ಜೊತೆ ಸಂಘರ್ಷ ನಡೆಸಿದ್ದರಿಂದ ರಾಜಧಾನಿಯ ಪ್ರಮುಖ ಸ್ಥಳಗಳು ಅರಾಜಕವಾಗಿದ್ದವು.

ಮೂರು ಕೃಷಿ ಕಾಯ್ದೆಗಳ ವಿರುದ್ಧ ಎರಡು ತಿಂಗಳಿನಿಂದ ನಡೆಯುತ್ತಿದ್ದ ಶಾಂತಿಯುತ ಪ್ರತಿಭಟನೆ ಭಗ್ನವಾಗಿದ್ದು, ಹಿಂಸಾಚಾರ ತಾಂಡವವಾಡಿತು.

ಹಲವಾರು ಷರತ್ತುಗಳನ್ನು ವಿಧಿಸಿದ್ದ ದೆಹಲಿ ಪೊಲೀಸರು, ಶಾಂತಿಯುತ ಟ್ರ್ಯಾಕ್ಟರ್ ಪರೇಡ್‌ಗೆ ಅನುಮತಿ ನೀಡಿದ್ದರು. ರಾಜಧಾನಿಯ ಗಣರಾಜ್ಯೋತ್ಸವ ಸಮಾರಂಭ ಮುಗಿದ ನಂತರವೇ ಟ್ರ್ಯಾಕ್ಟರ್ ಪರೇಡ್ ಆರಂಭಿಸಬೇಕೆಂದು ತಿಳಿಸಲಾಗಿತ್ತು.

ಆದರೆ, ಅಧಿಕಾರಿಗಳು ತಿಳಿಸಿದ ಸಮಯಕ್ಕಿಂತ ಎರಡು ಗಂಟೆ ಮೊದಲೇ ಬ್ಯಾರಿಕೇಡ್‌ಗಳನ್ನು ಧ್ವಂಸಗೊಳಿಸಿ ರೈತರು ನಗರಕ್ಕೆ ನುಗ್ಗಿದರು. ಉಕ್ಕು ಹಾಗೂ ಕಾಂಕ್ರೀಟ್ ತಡೆಗಳನ್ನು ಧ್ವಂಸಗೊಳಿಸಲಾಯಿತು. ಟ್ರೇಲರ್ ಟ್ರಕ್‌ಗಳನ್ನು ಉರುಳಿಸಿದ ನಂತರ ನಗರದ ಹಲವೆಡೆ ಸಂಘರ್ಷ ನಡೆಸಲಾಯಿತು.

ರಾಜಪಥದಲ್ಲಿ ದೇಶದ ಹೆಮ್ಮೆಯ ಸಂಕೇತವಾಗಿ ಸೈನಿಕ ಬಲ ಪ್ರದರ್ಶನ ನಡೆಯುವ ಬದಲು, ಪ್ರತಿಭಟನಾ ನಿರತ ರೈತ ಹಿಂಸಾ ಭಂಗದ ಪ್ರದರ್ಶನವನ್ನು (4ನೇ ಪುಟಕ್ಕೆ)









### ಆರಂಭದಲ್ಲಿ ಸಂಭ್ರಮ ಪುಷ್ಪಗಳಿಂದ ಸ್ವಾಗತ

ರೈತರ ಟ್ರ್ಯಾಕ್ಟರ್ ಪರೇಡ್‌ನ ಆರಂಭದಲ್ಲಿ ದೃಶ್ಯಗಳು ಭಿನ್ನವಾಗಿದ್ದವು. ಬೆಳಿಗ್ಗೆ ರೈತರು ರಂಗ್ ದೇ ಬಸಂತಿ ಹಾಗೂ ಜೈ ಜವಾನ್ ಜೈ ಕಿಸಾನ್ ಘೋಷಣೆಗಳೊಂದಿಗೆ ಟ್ರ್ಯಾಕ್ಟರ್, ಮೋಟರ್ ಬೈಕ್ ಹಾಗೂ ಕುದುರೆಗಳನ್ನು ಏರಿ ಗಡಿ ದಾಟಿದರು. ಕೆಲವರು ಕ್ರೇನ್ ಮೇಲೇರಿ ಬಂದಿದ್ದರು. ಸ್ಥಳೀಯರು ರಸ್ತೆಯ ಇಕ್ಕೆಲಗಳಲ್ಲಿ ನಿಂತು ಹೂಗಳನ್ನು ಎರಚಿ ರೈತರನ್ನು ಸ್ವಾಗತಿಸಿದರು. ದೇಶಭಕ್ತಿಗೀತೆಗಳ ಸಮೇತ ಪ್ರತಿಭಟನಾ ರೈತರು ನರ್ತಿಸುತ್ತಾ ರಾಷ್ಟ್ರಧ್ವಜ ಹಿಡಿದು ಬರುತ್ತಿದ್ದರು. ಆದರೆ, ನಂತರ ಪರಿಸ್ಥಿತಿ ಸಂಪೂರ್ಣವಾಗಿ (4ನೇ ಪುಟಕ್ಕೆ)

### ಸಂಬಂಧ ಇಲ್ಲ ಎಂದ ರೈತರ ಒಕ್ಕೂಟ



ನವದೆಹಲಿ, ಜ. 26 - ಪ್ರತಿಭಟನಾ ನಿರತ ರೈತರ ಒಕ್ಕೂಟದ ಸಂಯುಕ್ತ ಕಿಸಾನ್ ಮೋರ್ಚಾ, ದೆಹಲಿಯಲ್ಲಿ ಟ್ರ್ಯಾಕ್ಟರ್ ಪರೇಡ್ ವೇಳೆ ನಡೆದ ಹಿಂಸಾಚಾರಕ್ಕೂ ತನಗೂ ಸಂಬಂಧ ಇಲ್ಲ ಎಂದು ಹೇಳಿದೆ. ಅನಪೇಕ್ಷಿತ ಹಾಗೂ ಒಪ್ಪಲಾಗದ ಘಟನೆಗಳಿಗೆ ಕೆಲ ಸಮಾಜ ವಿರೋಧಿ ಶಕ್ತಿಗಳು ನುಸುಳಿರುವು ದು ಕಾರಣ ಎಂದು (4ನೇ ಪುಟಕ್ಕೆ)

### ಟ್ರ್ಯಾಕ್ಟರ್ ಉರುಳಿ ಓರ್ವ ರೈತನ ಸಾವು

ನವದೆಹಲಿ, ಜ. 26 - ಟ್ರ್ಯಾಕ್ಟರ್ ಪರೇಡ್ ವೇಳೆ ರೈತನೋರ್ವನ ಟ್ರ್ಯಾಕ್ಟರ್ ಉರುಳಿ ಸಾವು ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕೇಂದ್ರ ದೆಹಲಿ. ಐ.ಟಿ.ಒ.ದಲ್ಲಿ ಅಪಘಾತ ಸಂಭವಿಸಿದೆ. ಪೂರ್ವ ನಿರ್ಧರಿತ ಮಾರ್ಗದಲ್ಲಿ ತೆರಳುವಾಗ ಅವಘಡವಾಗಿದೆ ಎಂದು (4ನೇ ಪುಟಕ್ಕೆ)

### ಹಿಂಸಾಚಾರ; ಅಂತರ್ಜಾಲಕ್ಕೆ ಕತ್ತರಿ

ನವದೆಹಲಿ, ಜ. 26 - ರೈತ ಸಂಘಟನೆಗಳ ಟ್ರ್ಯಾಕ್ಟರ್ ಪರೇಡ್ ವೇಳೆ ಉಂಟಾದ ಹಿಂಸಾಚಾರದ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ಹಲವೆಡೆ ಅಂತರ್ಜಾಲ ಸ್ಥಗಿತಗೊಳಿಸಲಾಗಿತ್ತು. ಸಿಂಘು, ಘಾಜಿಪುರ, ಟಿಕ್ರಿ, ಮುಕರ್ಬ ಚೌಕ್, ನಂಗ್ಲೋಯಿ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಅಂತರ್ಜಾಲವನ್ನು ಮಂಗಳವಾರ ಮಧ್ಯರಾತ್ರಿಯವರೆಗೆ ಸ್ಥಗಿತಗೊಳಿಸಲಾಗಿತ್ತು.

## ಪರೇಡ್‌ನಲ್ಲಿ ಗಮನ ಸೆಳೆದ ರಾಮ ಮಂದಿರ ಸ್ತಬ್ಧ ಚಿತ್ರ




ನವದೆಹಲಿ, ಜ. 26 - ತೀರ್ಥಕ್ಷೇತ್ರವಾದ ಅಯೋಧ್ಯೆಯ ರಾಮ ಮಂದಿರ ಬಿಂಬಿಸುವ ಸ್ತಬ್ಧಚಿತ್ರ ರಾಜಧಾನಿ ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಗಮನ ಸೆಳೆಯಿತು. 17 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಸ್ತಬ್ಧಚಿತ್ರಗಳು ಪರೇಡ್‌ನಲ್ಲಿ ಸಾಗಿ ಬಂದವು. ಕೊರೊನಾ ಹಿನ್ನೆಲೆಯಲ್ಲಿ ಈ ವರ್ಷ ಗಣರಾಜ್ಯೋತ್ಸವದ ಸಂಭ್ರಮಕ್ಕೂ ಕತ್ತರಿ ಬಿದ್ದಿತ್ತು. (4ನೇ ಪುಟಕ್ಕೆ)

## ಗಣರಾಜ್ಯೋತ್ಸವದಲ್ಲಿ ಮೊದಲ ಬಾರಿಗೆ ಹಾರಿದ ರಫೇಲ್

ನವದೆಹಲಿ, ಜ. 26 - ಇತ್ತೀಚೆಗೆ ಫ್ರಾನ್ಸ್‌ನಿಂದ ಖರೀದಿಸಲಾದ ರಫೇಲ್ ಸಮರ ವಿಮಾನ ಗಣರಾಜ್ಯೋತ್ಸವ ಸಂದರ್ಭದಲ್ಲಿ ಮೊದಲ ಬಾರಿಗೆ ಹಾರಾಟ ನಡೆಸಿತು. ರಫೇಲ್ ವಿಮಾನಗಳು ಬ್ರಹ್ಮಾಸ್ತ್ರ ಸ್ವರೂಪದಲ್ಲಿ ಹಾರಿದವು. ರಫೇಲ್ ವಿಮಾನಗಳು ಏಕಲವ್ಯ ಸ್ವರೂಪದ ಇನ್ನೊಂದು ವೈಮಾನಿಕ ಹಾರಾಟದ ಭಾಗವಾಗಿದ್ದವು.

ಎರಡು ಜಗ್ವಾರ್ ಹಾಗೂ ಎರಡು ಮಿಗ್ - 29 ವಿಮಾನಗಳ ಜೊತೆ ರಫೇಲ್ ಏಕಲವ್ಯ ಸ್ವರೂಪದಲ್ಲಿ 300 ಮೀಟರ್ ಎತ್ತರದಲ್ಲಿ ಹಾರಿತು. ಇಂಗ್ಲಿಷ್‌ನ 'ವಿ' ಆಕೃತಿಯ ಈ (4ನೇ ಪುಟಕ್ಕೆ)

## ಜಿಲ್ಲಾ ಪ್ರಗತಿ ವರದಿ ಮಂಡಿಸಿದ ಸಚಿವ ಭೈರತಿ

### ಗಣರಾಜ್ಯೋತ್ಸವದಲ್ಲಿ ಜಿಲ್ಲಾ ಕ್ರೀಡಾಂಗಣ ಬಣ ಬಣ, ಸುದೀರ್ಘ ಭಾಷಣ

ದಾವಣಗೆರೆ, ಜ. 26 – ಜಿಲ್ಲಾಡಳಿತದ ವತಿಯಿಂದ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ಅವರು ಧ್ವಜಾರೋಹಣ ನೆರವೇರಿಸಿದರು.

ಕೊರೊನಾ ಹಿನ್ನೆಲೆಯಲ್ಲಿ ಈ ಹಿಂದಿನ ಗಣರಾಜ್ಯೋತ್ಸವಗಳ ಮಾದರಿಯಂತೆ ಈ ಬಾರಿ ಶಾಲಾ ಮಕ್ಕಳು ಉಪಸ್ಥಿತರಿರಲಿಲ್ಲ. ಸಾಂಸ್ಕೃತಿಕ ಕಾರ್ಯಕ್ರಮಗಳೂ ನೆರವೇರಲಿಲ್ಲ. ಇಡೀ ಕ್ರೀಡಾಂಗಣ ಖಾಲಿಯಾಗಿ ಬಣಗುಡುತ್ತಿತ್ತು. ಕವಾಯತು ಪೊಲೀಸರ ತಂಡಗಳು ಮಾತ್ರ ಮೈದಾನದಲ್ಲಿದ್ದವು. ಸಾರ್ವಜನಿಕರಿಗಿಂತ ರಾಜಕಾರಣಿಗಳು ಹಾಗೂ ಅಧಿಕಾರಿಗಳ ಉಪಸ್ಥಿತಿಯೇ ಹೆಚ್ಚಾಗಿತ್ತು.

ಈ ಸಂದರ್ಭದಲ್ಲಿ ಧ್ವಜಾರೋಹಣ ನೆರವೇರಿಸಿದ ನಂತರ ಸುಮಾರು ಅರ್ಧ ಗಂಟೆಗಳ ಕಾಲ ಮಾತನಾಡಿದ ಸಚಿವ ಬಸವರಾಜ್, ಕೊರೊನಾ ಸಂದರ್ಭದಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳ ಬಗ್ಗೆ ವಿವರಿಸಿದರು. ಕೃಷಿ ಇಲಾಖೆ, ಆರೋಗ್ಯ ಇಲಾಖೆ, ಕಂದಾಯ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ತೋಟಗಾರಿಕಾ ಇಲಾಖೆಗಳ ಕಾರ್ಯ ನಿರ್ವಹಣೆ ಕುರಿತು ವಿವರ ನೀಡಿದರು. (4ನೇ ಪುಟಕ್ಕೆ)



ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಪೊಲೀಸ್ ಪರೇಡ್ ದೃಶ್ಯ.

### ಪ್ರಥಮ ಪ್ರಜೆಗೆ ಪೊಲೀಸ್ ತಡೆ



ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ ಆಗಮಿಸಿದ್ದ ಪಾಲಿಕೆ ಮಹಾಪೌರರಾದ ಬಿ.ಜಿ. ಅಜಯ ಕುಮಾರ್ ಅವರನ್ನು ಪೊಲೀಸರು ವೇದಿಕೆಗೆ ಬರದಂತೆ ತಡೆದರು. ದಾವಣಗೆರೆ ನಗರದ ಪ್ರಥಮ ಪ್ರಜೆ ಅಜಯ್ ಕುಮಾರ್ ವೇದಿಕೆಗೆ ಹತ್ತಬೇಕಾದಾಗ ಅವರನ್ನು ತಡೆದಿದ್ದು, ಕಾರ್ಯಕ್ರಮದ ನಂತರ ಬಹಳಷ್ಟು ಚರ್ಚೆಗೆ ಕಾರಣವಾಯಿತು.

ಪತ್ರಿಕಾ ಛಾಯಾಗ್ರಹಕರು ಮತ್ತು ದೃಶ್ಯ ಮಾಧ್ಯಮಗಳ ವಿಡಿಯೋಗ್ರಾಫರ್‌ಗಳಿಗೆ ಸೂಕ್ತ ವ್ಯವಸ್ಥೆ ಮಾಡದೇ ಇರುವುದೂ ಗೊಂದಲಕ್ಕೆ ಕಾರಣವಾಯಿತು. ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಅವರು ರಾಷ್ಟ್ರಧ್ವಜಾರೋಹಣ ಮಾಡುವ ಛಾಯಾಚಿತ್ರ ಸಮರ್ಪಕವಾಗಿ ತೆಗೆಯಲು ಅವಕಾಶ ಇಲ್ಲದ್ದರಿಂದ ಈ ಗೊಂದಲವಾಯಿತು. ಕಾರ್ಯಕ್ರಮದ ನಂತರ ಐಜಿಪಿ ರವಿ ಪತ್ರಕರ್ತರೊಂದಿಗೆ ಮಾತುಕತೆ ನಡೆಸಿ, ಗೊಂದಲಕ್ಕೆ ತೆರೆ ಎಳೆದರು.

## ಹಡಗಲಿ ತಾ. ಸೋಗಿ ವೀರಭದ್ರೇಶ್ವರ ರಥೋತ್ಸವ : ಲಘು ಲಾಠಿ ಪ್ರಹಾರ

ಹೂವಿನಹಡಗಲಿ, ಜ.26- ತಾಲ್ಲೂಕಿನ ಸೋಗಿ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವವು ಇಂದು ಸಂಜೆ ನಡೆದ ಸಂದರ್ಭದಲ್ಲಿ ಸರಳವಾಗಿ ಕೋವಿಡ್ ನಿಯಮದಂತೆ ಸರ್ಕಾರ ನಿಗದಿಪಡಿಸಿದ ಸ್ಥಳದ ಬದಲು ರಥವನ್ನು ಮುಂದೆ ಎಳೆದ ಕಾರಣ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದರು. ಇದರಿಂದ ನೆರೆದಿದ್ದ ಭಕ್ತರ ನೂಕು ನುಗ್ಗಲಿನಿಂದ ಕೆಲವರಿಗೆ ಗಾಯಗಳಾಗಿವೆ ಎಂದು ಪ್ರತ್ಯಕ್ಷದರ್ಶಿಗಳು ಪತ್ರಿಕೆಗೆ ತಿಳಿಸಿದ್ದಾರೆ.

ಕೋವಿಡ್ ನಿಯಮದಂತೆ ವಿಜೃಂಭಣೆಯಿಂದ, ಜನದಟ್ಟನೆಯೊಂದಿಗೆ ಹಬ್ಬ, ಜಾತ್ರೆ, ಉತ್ಸವಗಳನ್ನು ನಡೆಸುವಂತಿಲ್ಲ. ಆದರೆ ಧಾರ್ಮಿಕ ಭಾವನೆಗೆ ಧಕ್ಕೆಯಾಗದಂತೆ ಸರಳವಾಗಿ ರಥೋತ್ಸವವನ್ನು ಸೀಮಿತ (2ನೇ ಪುಟಕ್ಕೆ)

## ಭಾರತದ ಬೆಳವಣಿಗೆ ದರ ಶೇ.11.5

ವಾಷಿಂಗ್ಟನ್, ಜ. 26 – 2021ರಲ್ಲಿ ಭಾರತದ ಬೆಳವಣಿಗೆ ದರ ಶೇ.11.5ರಷ್ಟಿರಲಿದೆ ಎಂದು ಐ.ಎಂ.ಎಫ್. ಅಂದಾಜಿಸಿದೆ. ಕೊರೊನಾ ನಂತರ ಎರಡಂಕಿಯ ಬೆಳವಣಿಗೆ ದರ ಕಾಣುವ ಏಕೈಕ ಪ್ರಮುಖ ಆರ್ಥಿಕ ದೇಶ ಭಾರತವಾಗಿರಲಿದೆ ಎಂದೂ ತಿಳಿಸಲಾಗಿದೆ.

ಇತ್ತೀಚಿನ ಪ್ರಕಟಣೆಯಲ್ಲಿ ಅಂತರರಾಷ್ಟ್ರೀಯ ಹಣಕಾಸು ನಿಧಿ (ಐ.ಎ.ಎಫ್.) ತನ್ನ ಅಂದಾಜನ್ನು ತಿಳಿಸಿದೆ. 2020ರಲ್ಲಿ ಕೊರೊನಾ ಕಾರಣದಿಂದಾಗಿ ದೇಶದ ಆರ್ಥಿಕ ವ್ಯವಸ್ಥೆ ಶೇ.8ರಷ್ಟು ಕುಸಿಯುವ ಅಂದಾಜಿದೆ.

2021ರಲ್ಲಿ ಚೀನಾ ಶೇ.8.1, ಸ್ಪೇನ್ ಶೇ.5.9 ಹಾಗೂ ಫ್ರಾನ್ಸ್ ಶೇ.5.5ರ ಬೆಳವಣಿಗೆ ಕಾಣಲಿವೆ ಎಂದು ಅಂದಾಜಿಸಲಾಗಿದೆ.

## ವೈ.ಜಿ.ಆರ್. ನಿಧನ



ತರಳಬಾಳು ಬಡಾವಣೆ ವಾಸಿ, ನಿವೃತ್ತ ಮುಖ್ಯೋಪಾಧ್ಯಯರಾದ ಯರಗಟ್ಟಿಹಳ್ಳಿ ದಿ.ಗೌಡ್ರು ಈಶ್ವರಪ್ಪನವರ ಹಿರಿಯ ಪುತ್ರ

### ವೈ.ಜಿ.ರುದ್ರಪ್ಪ

ಇವರು ದಿನಾಂಕ 26.01.2021 ರಂದು ಮಂಗಳವಾರ ಸಂಜೆ 4 ಗಂಟೆಗೆ ದೈವಾಧೀನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 73 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸಹೋದರರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ದಿನಾಂಕ 27.01.2021 ರಂದು ಬುಧವಾರ ಮಧ್ಯಾಹ್ನ 1 ಗಂಟೆಗೆ ಚನ್ನಗಿರಿ ತಾಲ್ಲೂಕು ಯರಗಟ್ಟಿಹಳ್ಳಿಯ ಮೃತರ ತೋಟದಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತ ಕುಟುಂಬವರ್ಗ
**ಪತ್ನಿ: ಶ್ರೀಮತಿ ವಿಮಲ ಹಾಗೂ ಮಕ್ಕಳು, ಸಹೋದರರು ಮತ್ತು ಯರಗಟ್ಟಿಹಳ್ಳಿ ಗೌಡ್ರ ವಂಶಸ್ಥರು, ಬಂಧುಗಳು.**

## ಕಾಯ್ದೆ : ನಗರದಲ್ಲೂ ಟ್ರ್ಯಾಕ್ಟರ್ ಪರೇಡ್



ದಾವಣಗೆರೆ, ಜ.26- ಕೇಂದ್ರ ಸರ್ಕಾರ ಜಾರಿಗೆ ತರಲುದ್ದೇಶಿಸಿರುವ ಕೃಷಿ ಕಾಯ್ದೆಗಳನ್ನು ಹಿಂಪಡೆಯುವಂತೆ ಆಗ್ರಹಿಸಿ ದೆಹಲಿಯಲ್ಲಿ ರೈತರು ನಡೆಸುವ ಗಣರಾಜ್ಯೋತ್ಸವ ಪರೇಡ್ ಬೆಂಬಲಿಸಿ, ನಗರದಲ್ಲೂ ಮಂಗಳವಾರ ಟ್ರ್ಯಾಕ್ಟರ್ ಪರೇಡ್ ನಡೆಸಲಾಯಿತು. ವಿವಿಧ ರೈತ ಸಂಘಟನೆಗಳು ಹಾಗೂ ಕಾರ್ಮಿಕ ಸಂಘಟನೆಗಳು ಟ್ರ್ಯಾಕ್ಟರ್ ಪರೇಡ್‌ನಲ್ಲಿ ಭಾಗವಹಿಸಿದ್ದವು.

ಇಲ್ಲಿನ ಅಂಬೇಡ್ಕರ್ ವೃತ್ತದಲ್ಲಿ ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾ ರ್ಪಣೆ ಮಾಡುವ ಮೂಲಕ ಟ್ರ್ಯಾಕ್ಟರ್ ಪರೇಡ್‌ಗೆ ಚಾಲನೆ ನೀಡಲಾಯಿತು.

**ಜನಪ್ರತಿನಿಧಿಗಳಿಗೆ ಗಣರಾಜ್ಯೋತ್ಸವ ಆಚರಿಸುವ ಯಾವುದೇ ಅರ್ಹತೆ ಇಲ್ಲ**
**- ಹೆಚ್.ಕೆ. ರಾಮಚಂದ್ರಪ್ಪ**

25 ಕ್ಕೂ ಹೆಚ್ಚು ಟ್ರ್ಯಾಕ್ಟರ್‌ಗಳು ಪರೇಡ್ ನಡೆಸಿದವು. ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ, ಅಖಿಲ ಭಾರತ ಕಿಸಾನ್ ಸಭಾ, (2ನೇ ಪುಟಕ್ಕೆ)



## ಎಜಿಬಿಯಿಂದ ವೀರೇಶ್ವರ ಪುಣ್ಯಾಶ್ರಮಕ್ಕೆ ಆಹಾರ ಪದಾರ್ಥಗಳ ವಿತರಣೆ



ದಾವಣಗೆರೆ, ಜ.26- ನಗರದ ಎಜಿಬಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಬಾಡಾ ಕ್ರಾಸ್ ಬಳಿ ಇರುವ ಶ್ರೀ ವೀರೇಶ್ವರ ಪುಣ್ಯಾಶ್ರಮಕ್ಕೆ ಭೇಟಿ ನೀಡಿ, ಆಶ್ರಮದ ಅಂಧ ಮಕ್ಕಳಿಗೆ ಆಹಾರ ಪದಾರ್ಥಗಳು ಮತ್ತಿತರ ವಸ್ತುಗಳನ್ನು ನೀಡಿ, ಅವರೊಡನೆ ಊಟ ಮಾಡುವುದರ ಮೂಲಕ ಗಣರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿದರು.

ಕಾರ್ಯಕ್ರಮದಲ್ಲಿ ಆಶ್ರಮದ ಅಂಧ ಮಕ್ಕಳ ಶಿಕ್ಷಣ ಸಮಿತಿಯ ಅಧ್ಯಕ್ಷ ಅಥಣಿ ವೀರಣ್ಣ, ಕಾರ್ಯದರ್ಶಿ ಎ.ಹೆಚ್.ಶಿವಮೂರ್ತಿಸ್ವಾಮಿ, ಸಹ ಕಾರ್ಯದರ್ಶಿ ಜೆ.ಎನ್. ಕರಿಬಸಪ್ಪ, ಸದಸ್ಯರಾದ ಬಸವನಗೌಡ ಮತ್ತಿತರರು ಉಪಸ್ಥಿತರಿದ್ದರು.

# ದೇಶದ ಪ್ರಗತಿ ಹಿಂದೆ ಮಹಾತ್ಮರ ಬಲಿದಾನದ ಶ್ರಮವಿದೆ

### ಹರಿಹರ: ಗಣರಾಜ್ಯೋತ್ಸವದಲ್ಲಿ ಶಾಸಕ ರಾಮಪ್ಪ



ಹರಿಹರ, ಜ26- ವಿಶ್ವ ಮಟ್ಟದಲ್ಲಿ ಗುರ್ತಿಸಿಕೊಳ್ಳುತ್ತಿರುವ ಭಾರತದ ಇಂದಿನ ಪ್ರಗತಿಗೆ ದೇಶ ಕ್ಕಾಗಿ ಹೋರಾಟ ಮಾಡಿದ ಮಹಾನ್ ವ್ಯಕ್ತಿಗಳ ತ್ಯಾಗ, ಬಲಿದಾನಗಳೇ ಕಾರಣ ಎಂದು ಶಾಸಕ ಎಸ್. ರಾಮಪ್ಪ ಹೇಳಿದರು.

ನಗರದ ಗಾಂಧಿ ಮೈದಾನದಲ್ಲಿ ನಡೆದ 72 ನೇ ಗಣರಾಜ್ಯೋತ್ಸವ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು.

ದೇಶವು ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ವಿಶ್ವಮಟ್ಟದಲ್ಲಿ ಪ್ರಗತಿಯನ್ನು ಸಾಧಿಸಲು ಬ್ರಿಟಿಷ್ ಸರ್ಕಾರದ ವಿರುದ್ಧ ಹೋರಾಟ ಮಾಡಿದ ಮಹಾತ್ಮಾ ಗಾಂಧಿ, ರಾಣಿ ಚೆನ್ನಮ್ಮ , ಬಾಲ ಗಂಗಾಧರ ತಿಲಕ್, ಲಾಲಾ ಲಜಪತರಾಯ್, ಸುಭಾಷ್ ಚಂದ್ರ ಬೋಸ್, ಸಂಗೊಳ್ಳಿ ರಾಯಣ್ಣ ಮುಂತಾದ ನಾಯಕರ ಬಲಿದಾನದ ಪ್ರತಿಫಲವಾಗಿದ್ದು, ಪ್ರಸ್ತುತ ದೇಶದ ಜನರು ನೆಮ್ಮದಿ ಜೀವನ ನಡೆಸುವುದಕ್ಕೆ ದಾರಿಯಾಯಿತು ಎಂದರು.

ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನವನ್ನು ರಚಿಸಿ ಅದರಲ್ಲಿ ದೇಶದ ರಕ್ಷಣೆಗೆ ಸಂಬಂಧಿಸಿದ ಕಾನೂನು ರಚಿಸಿದ ಪರಿಣಾಮವಾಗಿ ಇಂದು ಅನೇಕ ಸಮಸ್ಯೆಗಳು ಬಂದರು ಸಹ ಅದನ್ನು ಸರಿಯಾದ ರೀತಿಯಲ್ಲಿ ಬಗೆಹರಿಸುವ ವ್ಯವಸ್ಥೆ ಸಂವಿಧಾನ ದಲ್ಲಿದೆ. ಡಾ. ಅಂಬೇಡ್ಕರ್ ರವರಿಗೆ ವಿಶ್ವದಲ್ಲಿ ಅತ್ಯಂತ ಶ್ರೇಷ್ಠ ಗೌರವ ಸಿಕ್ಕಿದೆ. ಇಂತಹ ಮಹಾನ್ ವ್ಯಕ್ತಿಗಳ ರಾಷ್ಟ್ರವಾದ ಭಾರತ ಮುಂದೆಯೂ ಸಹ ಯಾವುದೇ ರೀತಿಯ ತೊಂದರೆ ಬರದಂತೆ ಉತ್ತಮವಾದ ರೀತಿಯಲ್ಲಿ ಪ್ರಗತಿಯನ್ನು ಸಾಧಿಸುವ ನಿಟ್ಟಿನಲ್ಲಿ ನಾವೆಲ್ಲ ಹೆಜ್ಜೆಗಳನ್ನು ಹಾಕಬೇಕು ಎಂದು ಕರೆ ನೀಡಿದರು.

ತಹಶೀಲ್ದಾರ್ ಕೆ. ಬಿ. ರಾಮಚಂದ್ರಪ್ಪ, ತಾ.ಪಂ. ಅಧ್ಯಕ್ಷೆ ಶ್ರೀದೇವಿ ಮಂಜಪ್ಪ, ನಗರಸಭೆ ಪೌರಾಯುಕ್ತ ಉದಯಕುಮಾರ್ ಮಾತನಾಡಿದರು.

ವಿವಿಧ ರಂಗದಲ್ಲಿ ಸಾಧನೆ ಮಾಡಿದ ಆರೋಗ್ಯ ಇಲಾಖೆಯ ಡಾ. ಚಂದ್ರಮೋಹನ್, ಡಾ. ವಿಶ್ವನಾಥ್, ಉಮ್ಮಣ್ಣ, ಹೆಚ್. ಸುಮಂಗಳಾ, ಶ್ರೀನಿವಾಸ್ , ಲಕ್ಷ್ಮಿ, ದಾದಾಪೀರ್, ಶಿಕ್ಷಣ ಇಲಾಖೆಯ ಶಿವಮೂರ್ತಿ, ಅಕ್ಷರ ದಾಸೋಹ ಅಧಿಕಾರಿ ರಾಮಕೃಷ್ಣಪ್ಪ, ಅಗ್ನಿ ಶಾಮಕದಳ ಪಿಎಸ್ಐ ಸಂಜೀವ್ ಕುಮಾರ್, ಅಂಗನವಾಡಿ ಶಿಕ್ಷಕಿ ಬಸಮ್ಮ, ಸಾವಿತ್ರಾ, ಪೊಲೀಸ್ ಇಲಾಖೆ ಮುರುಳೀಧರ್, ಕನ್ನಡ ಪರ ಸಂಘಟನೆಯ ಪ್ರವೀಣ್, ಪತ್ರಕರ್ತ ಪಂಚಾಕ್ಷರಿ, ಕುಮಾರ್ ಮುಂತಾದವರಿಗೆ ತಾಲ್ಲೂಕು ಆಡಳಿತದಿಂದ ಸನ್ಮಾನ ಮಾಡಿ ಗೌರವಿಸಲಾಯಿತು.

ಸಿಪಿಐ ಸತೀಶ್ ಕುಮಾರ್, ಇಓ ಗಂಗಾಧರನ್, ಬಿಇಓ ಯು. ಬಸವರಾಜಪ್ಪ, ನಗರಸಭೆ ಸದಸ್ಯ ಜಂಬಣ್ಣ ಗುತ್ತೂರು, ಎಂ.ಎಸ್. ಬಾಬುಲಾಲ್, ನಗರಸಭೆ ಎಇಇ ಬಿರಾದಾರ, ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ ಇನ್ನಿತರರು ಹಾಜರಿದ್ದರು.

## ಶ್ರೀ ಭಾಸ್ಕರಾಚಾರ್ಯ ಜ್ಯೋತಿರ್ವಿದ್ಯಾ ಪ್ರತಿಷ್ಠಾನದಿಂದ 'ಸಂಸ್ಕಾರ ಸೌರಭ' ಪುಸ್ತಕ ಲೋಕಾರ್ಪಣೆ

ದಾವಣಗೆರೆ, ಜ.26- ನಗರದ ಶ್ರೀ ಭಾಸ್ಕರಾಚಾರ್ಯ ಜ್ಯೋತಿರ್ವಿದ್ಯಾ ಪ್ರತಿಷ್ಠಾನದ ಆಶ್ರಯದಲ್ಲಿ ಜ್ಯೋತಿಷಿಯೂ ಆಗಿರುವ ಪತ್ರಿಕಾ ಅಂಕಣಕಾರ ಡಾ. ಸಿ.ಕೆ.ಆನಂದತೀರ್ಥಾಚಾರ್ ಅವರು ಸಂಗ್ರಹಿಸಿ ಬರೆದಿರುವ ಸಂಸ್ಕಾರಗಳ ಹಿನ್ನೆಲೆ ಮತ್ತು ಮುಹೂರ್ತ ಭಾಗದ 'ಸಂಸ್ಕಾರ ಸೌರಭ' ಪುಸ್ತಕ ನಾಡಿದ್ದು ದಿನಾಂಕ 28 ರ ಗುರುವಾರ ಬೆಳಿಗ್ಗೆ 10-30 ಕ್ಕೆ ನಗರದ ಕುವೆಂಪು ಕನ್ನಡ ಭವನದಲ್ಲಿ ಲೋಕಾರ್ಪಣೆಗೊಳ್ಳಲಿದೆ ಎಂದು ಪ್ರತಿಷ್ಠಾನದ ಖಜಾಂಚಿ ಆರ್.ಬಿ. ಪ್ರವೀಣ್‌ಕುಮಾರ್ ತಿಳಿಸಿದ್ದಾರೆ.

ಆವರಗೊಳ್ಳದ ಪುರವರ್ಗ ಹಿರೇಮಠದ ಶ್ರೀ ಓಂಕಾರೇಶ್ವರ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿ, ಕೃತಿ ಲೋಕಾರ್ಪಣೆ ಮಾಡಲಿದ್ದಾರೆ. ಕೃತಿಯ ಸಂಗ್ರಹಕಾರ ಆನಂದತೀರ್ಥಾಚಾರ್ ಪ್ರಾಸ್ತಾವಿಕವಾಗಿ ಮಾತನಾಡಲಿದ್ದು, ಪುಸ್ತಕದ ಪರಿಚಯವನ್ನು ಕರ್ನಾಟಕ ರಾಜ್ಯ ಜ್ಯೋತಿಷ್ಯ ಹಾಗೂ ಜ್ಯೋತಿಷ್ಯ ಭೋದನೆಗಳ ಒಕ್ಕೂಟದ ಕಾರ್ಯದರ್ಶಿ ಬಿ.ಗಜೇಂದ್ರ ಮಾಡಲಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಭಾಸ್ಕಾರಾಚಾರ್ಯ ಜ್ಯೋತಿರ್ವಿದ್ಯಾ ಪ್ರತಿಷ್ಠಾನದ ಅಧ್ಯಕ್ಷ ಎಂ.ಗದಿಗೆಪ್ಪಯ್ಯ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಡಾ. ಹೆಚ್.ಎಸ್.ಮಂಜುನಾಥ ಕುರ್ಕಿ, ರಾಜ್ಯ ಜ್ಯೋತಿಷ್ಯ ಹಾಗೂ ಜ್ಯೋತಿಷ್ಯ ಭೋದನೆಗಳ ಒಕ್ಕೂಟದ ಖಜಾಂಚಿ ಡಾ. ಅನಂತ ರಾಘವನ್, ಜ್ಯೋತಿರ್ವಿಜ್ಞಾನ ಮಾಸಪತ್ರಿಕೆಯ ಸಂಪಾದಕ ವಿದ್ವಾನ್ ಗಣೇಶ್ ಹೆಗಡೆ ಆಗಮಿಸಲಿದ್ದಾರೆ. ಕಲಾಕುಂಚದ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಕಾರ್ಯಕ್ರಮ ನಿರೂಪಣೆ ಮಾಡಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಶ್ರೀ ಭಾಸ್ಕರಾಚಾರ್ಯ ಜ್ಯೋತಿರ್ವಿದ್ಯಾ ಪ್ರತಿಷ್ಠಾನದ ಪ್ರಾಚಾರ್ಯರಾದ ಸಿ.ಆರ್. ಪ್ರಸನ್ನಕುಮಾರ್, ಉಪನ್ಯಾಸಕರಾದ ಪರಮೇಶ್ವರಾಚಾರ್, ಸಿ.ಜೆ. ಮಂಜುನಾಥ್, ಹೆಚ್. ಷಣ್ಮುಖ ಉಪಸ್ಥಿತರಿದ್ದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕಲಾಕುಂಚ ಸಾಂಸ್ಕೃತಿಕ ಸಂಸ್ಥೆ, ಜಿಲ್ಲೆ ಸಮಾಚಾರ ಬಳಗ ಸಹಕಾರದೊಂದಿಗೆ ನಡೆಯುವ ಈ ಸಮಾರಂಭಕ್ಕೆ ಸಾಹಿತ್ಯಾಸಕ್ತರು ಅಗಮಿಸಲು ಶ್ರೀ ಭಾಸ್ಕರಾಚಾರ್ಯ ಜ್ಯೋತಿರ್ವಿದ್ಯಾ ಪ್ರತಿಷ್ಠಾನದ ಪದಾಧಿಕಾರಿಗಳು ಹಾಗೂ ಶಿಷ್ಯ ವೃಂದದವರು ವಿನಂತಿಸಿದ್ದಾರೆ.

## ಜಗಳೂರಿನಲ್ಲಿ ಇಂದು ಜನಸ್ಪಂದನ

ತಾಲ್ಲೂಕು ಆಡಳಿತ ಮತ್ತು ತಾಪಂ, ವಿವಿಧ ಇಲಾಖೆಗಳ ಸಹಯೋಗದಲ್ಲಿ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟನೆ ಹಾಗೂ ಇಲಾಖೆಗಳ ಸೌಲಭ್ಯ ವಿತರಣೆ ಸಮಾರಂಭ. ಸ್ಥಳ : ಗುರುಭವನ ಆವರಣ, ಸಮಯ : ಬೆಳಿಗ್ಗೆ 11-00 ಗಂಟೆಗೆ. ಶಂಕುಸ್ಥಾಪನೆ : ಬೈರತಿ ಬಸವರಾಜ್, ಗೌರವ ಉಪಸ್ಥಿತಿ ಜಿ. ಎಂ. ಸಿದ್ದೇಶ್ವರ, ಅಧ್ಯಕ್ಷತೆ : ಎಸ್.ವಿ.ರಾಮಚಂದ್ರ. ಮುಖ್ಯ ಅತಿಥಿಗಳು: ಶಾಂತ ಕುಮಾರಿ, ಶಶೀಧರ್, ರಘು ಆಚಾರ್ಯ, ಮೋಹನ್ ಕೊಂಡಜ್ಜಿ, ನಾರಾಯಣಸ್ವಾಮಿ, ಚಿದಾನಂದಗೌಡ, ತಿಪ್ಪೇಸ್ವಾಮಿ. ಆರ್. ಮಂಜು ಅ, ಜೆ. ಸವಿತಾ, ಎಸ್.ಕೆ. ಮಂಜುನಾಥ್, ಉಮಾ, ರೇಣುಕಾನಂದ, ಮಲ್ಲಿಕಾರ್ಜುನ ಬಾಬು, ಸಾಕಮ್ಮ, ಮುದೇಗೌಡರ ಬಸವರಾಜಪ್ಪ, ಲಲಿತಮ್ಮ ಶಿವಣ್ಣ, ಮಹಾಂತೇಶ್ ಬೀಳಗಿ, ಹನುಮಂತರಾಯ, ಪದ್ಮಾ ಬಸವಂತಪ್ಪ ಮತ್ತಿತರರು.

## ಗುರು ವಾದ್ಯ ವೃಂದದ ನಾಟಕ ಪ್ರದರ್ಶನ



ದಾವಣಗೆರೆ, ಜ.26- ನಗರದ ಶ್ರೀ ಗುರು ವಾದ್ಯವೃಂದದಿಂದ ಶ್ರೀಮತಿ ಚಿಂದೋಡಿ ಲೀಲಾ ಕಲಾಕ್ಷೇತ್ರದಲ್ಲಿ ಏರ್ಪಾಡಾಗಿದ್ದ ನಾಟಕ ಪ್ರದರ್ಶನದ ಉದ್ಘಾಟನೆಯನ್ನು ತಹಶೀಲ್ದಾರ್ ಗಿರೀಶ್ ಅವರು ತಬಲ ಬಾರಿಸುವ ಮೂಲಕ ಉದ್ಘಾಟಿಸಿದರು. ಎಪಿಎಂಸಿ ಅಧ್ಯಕ್ಷ ಎಸ್.ಕೆ. ಚಂದ್ರಶೇಖರ್, ಕ್ಷೇತ್ರ ಶಿಕ್ಷಣಾಧಿಕಾರಿ ಕೊಟ್ರೇಶ್, ನಿರಂಜನಮೂರ್ತಿ, ಕಲಾವಿದರ ಸಂಘದ ಅಧ್ಯಕ್ಷ ಬಿ.ಕೆ. ಗಣೇಶ್, ಚಿಂದೋಡಿ ಶಂಭುಲಿಂಗಪ್ಪ, ಬಿ. ಶಿವಕುಮಾರ್ ಮತ್ತಿತರರಿದ್ದರು.


ದ್ವಿತೀಯ ವರ್ಷದ ಪುಣ್ಯಸ್ಮರಣೆ



ಶ್ರೀ ಟಿ.ಎಸ್. ರಾಘವೇಂದ್ರ

ನೀವು ನಮ್ಮನ್ನಗಲಿ ಇಂದಿಗೆ
ಎರಡು ವರ್ಷಗಳಾದವು. ಸದಾ ನಿಮ್ಮ
ಸ್ಮರಣೆಯಲ್ಲಿರುವ ಮತ್ತು ನೀವು ಹಾಕಿಕೊಟ್ಟ
ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ.

ಟಿ.ಎಸ್.ವಿ. ಕುಟುಂಬ ವರ್ಗದವರು.
ಟಿ.ಎಸ್.ವಿ. ಟ್ರೇಡರ್ಸ್, ದಾವಣಗೆರೆ.


# ಕೊರೊನಾ ಸಮಸ್ಯೆಯಲ್ಲೂ ಕ್ಷೇತ್ರದ ಪ್ರಗತಿ



ಜಗಳೂರು, ಜ.26- ಕೊರೊನಾ ಮಹಾಮಾರಿ ಸಮಸ್ಯೆ ಇದ್ದರೂ ಕ್ಷೇತ್ರದ ಪ್ರಗತಿಯಲ್ಲಿ ತೊಂದರೆಯಾಗಿಲ್ಲ. ನೀರಾವರಿ ಯೋಜನೆಗಳಿಗೆ ನಮ್ಮ ಸರ್ಕಾರ ಅನುದಾನ ನೀಡಿದೆ ಎಂದು ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಶಾಸಕ ಎಸ್.ವಿ. ರಾಮಚಂದ್ರ ತಿಳಿಸಿದರು.

### ಮುಂದಿನ ಚುನಾವಣೆಗೂ ಸ್ಪರ್ಧಿಸಿ ಗೆಲ್ಲುವೆ

ಕ್ಷೇತ್ರದಲ್ಲಿ ನಾನು ಮುಂದಿನ ಚುನಾವಣೆ ಸ್ಪರ್ಧೆಗಿಳಿಯುವುದಿಲ್ಲ ಎಂಬ ವದಂತಿಗಳು ಹಬ್ಬಿದ್ದು ಇದಕ್ಕೆ ಯಾರೂ ಕಿವಿಕೊಡಬಾರದು. ಕ್ಷೇತ್ರಕ್ಕೆ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿರುವ ನಾನು ಏಕೆ ಚುನಾವಣೆಯಲ್ಲಿ ಸ್ಪರ್ಧಿಸಬಾರದು? ಎಂದು ಪ್ರಶ್ನಿಸಿದ ಅವರು, ಜನತೆ ನನ್ನನ್ನು ಉನ್ನತ ಶಿಖರಕ್ಕೆ ಬೆಳೆಸಿದ್ದೀರಿ, ಮತದಾರರ ಆಶೀರ್ವಾದ ಇರುವತನಕ ಸ್ಪರ್ಧೆ ಮಾಡುತ್ತೇನೆ.

-ಎಸ್.ವಿ.ರಾಮಚಂದ್ರ, ಶಾಸಕರು, ಜಗಳೂರು.

ಪಟ್ಟಣದ ಗುರುಭವನ ಆವರಣದಲ್ಲಿ ತಾಲ್ಲೂಕು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಹಮ್ಮಿಕೊಂಡಿದ್ದ 72ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

57 ಕೆರೆ ತುಂಬಿಸುವ ಯೋಜನೆ ಪ್ರಗತಿಯಲ್ಲಿದೆ. ಸಿರಿಗೆರೆ ಶ್ರೀಗಳ ಆಶೀರ್ವಾದದಿಂದ ಕ್ರಮವಾಗಿ ಜೂನ್-ಜುಲೈ 17, ಆಗಸ್ಟ್ - ಸೆಪ್ಟೆಂಬರ್ 17, ಡಿಸೆಂಬರ್ ಮಾಹೆಗಳಿಗೆ 23 ಕೆರೆಗಳಿಗೆ ನೀರು ಹರಿಸಿ ವರ್ಷದಂತ್ಯಕ್ಕೆ 57 ಕೆರೆಗಳಿಗೆ 3 ಹಂತಗಳಲ್ಲಿ ನೀರು ಭರ್ತಿಯಾಗಲಿವೆ ಎಂದರು.

ಜಿ.ಎಂ. ಸಿದ್ದೇಶ್ವರ ಅವರ ಸತತ ಪ್ರಯತ್ನದಿಂದ ಕೇಂದ್ರ ಅನುದಾನದಲ್ಲಿ 1200 ಕೋಟಿ ಅನುದಾನ ಮೀಸಲಿಟ್ಟು, ರಾಷ್ಟ್ರೀಯ ಯೋಜನೆಯನ್ನಾಗಿಸಿದೆ.

ನನ್ನ ಕನಸಿನ ಭದ್ರಾ ಮೇಲ್ದಂಡೆ ಯೋಜನೆಗೆ ಬಿಜೆಪಿ ನೇತೃತ್ವದ ಮುಖ್ಯಮಂತ್ರಿ ಯಡಿಯೂರಪ್ಪನವರ ಸರ್ಕಾರ ಅಧಿಕೃತ ಚಾಲನೆ ನೀಡಿದೆ. ಏಪ್ರಿಲ್ ತಿಂಗಳಿಗೆ ಜಾಗತಿಕ ಟೆಂಡರ್ ಪ್ರಕ್ರಿಯೆ ಆರಂಭವಾಗಲಿದೆ. ಮಾಹೆಯಲ್ಲಿ ಪ್ರಧಾನಿ ಮೋದಿಜಿ ಅವರನ್ನು ಆಹ್ವಾನಿಸಿ ಗಣ್ಯರ ಸಮ್ಮುಖದಲ್ಲಿ ಶಂಕುಸ್ಥಾಪನೆ ಕಾರ್ಯಕ್ರಮ ಹಮ್ಮಿಕೊಳ್ಳುವಾಸೆ ನನ್ನದು ಎಂದರು.

ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಡಾ.ನಾಗವೇಣಿ, ಗಣರಾಜ್ಯೋತ್ಸವದಲ್ಲಿ ಬಾಬಾ ಸಾಹೇಬರ ಭಾವಚಿತ್ರ ಕಡ್ಡಾಯದ ಆದೇಶವಿದೆ. ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗದಡಿ ನ್ಯಾಯ ಒದಗಿಸುವ ಶ್ರೇಷ್ಠ ಸಂವಿಧಾನದ ಮೌಲ್ಯಗಳನ್ನು ಪ್ರತಿಯೊಬ್ಬರೂ ಎತ್ತಿಹಿಡಿಯಬೇಕು ಎಂದರು.

ಈ ಸಂದರ್ಭದಲ್ಲಿ ಜಿಪಂ ಸದಸ್ಯ ಎಸ್.ಕೆ. ಮಂಜುನಾಥ್, ಪಟ್ಟಣ ಪಂಚಾಯಿತಿ ಅಧ್ಯಕ್ಷ ಆರ್. ತಿಪ್ಪೇಸ್ವಾಮಿ, ಉಪಾಧ್ಯಕ್ಷೆ ಲಲಿತ ಶಿವಣ್ಣ, ತಾಪಂ ಸದಸ್ಯ ಬಸವರಾಜ್ ಮಾತನಾಡಿದರು.

ಎಪಿಎಂಸಿ ಅಧ್ಯಕ್ಷ ರೇಣುಕಾನಂದ, ತಾ.ಪಂ ಸದಸ್ಯ ಸಿದ್ದೇಶ್, ವಕೀಲ ಬಸವರಾಜ್, ಶಂಕರ ನಾಯ್ಕ ತಿಮ್ಮೇಶ್, ಪ.ಪಂ ಸದಸ್ಯರಾದ ಲುಕ್ಮಾನ್ ಖಾನ್, ಶಕೀಲ್ ಅಹಮ್ಮದ್, ಮಂಜಮ್ಮ ವಿಶಾಲಾಕ್ಷಿ, ಜಿ., ಮಂಜುನಾಥ್, ಎನ್. ನವೀನ್ ಕುಮಾರ್, ದೇವರಾಜ್, ವಕೀಲರ ಸಂಘದ ಅಧ್ಯಕ್ಷ ಬಸವರಾಜ್, ಕ.ಸಾ.ಪ. ಅಧ್ಯಕ್ಷ ಹಜರತ್ ಅಲಿ, ಪ.ಪಂ ನಾಮನಿರ್ದೇಶನ ಸದಸ್ಯ ಬಿ.ಪಿ. ಸುಭಾನ್, ಈಶ್ವರಿ ವಿದ್ಯಾಲಯದ ಅಕ್ಕ ಭಾರತಿ, ತಾ.ಪಂ ಇಓ ಮಲ್ಲಾನಾಯ್ಕ, ಸಿಪಿಐ ಡಿ. ದುರುಗಪ್ಪ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಬಿ.ಮಹೇಶ್ವರಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ನಗರದಲ್ಲೂ ಟ್ರ್ಯಾಕ್ಟರ್ ಪರೇಡ್

(1ನೇ ಪುಟದಿಂದ) ಎಐಟಿಯುಸಿ, ನೆರಳು ಬೀಡಿ ಕಾರ್ಮಿಕರ ಸಂಘಟನೆ, ದಲಿತ ಶೋಷಿತ ಸಂಘರ್ಷ ಸಮಿತಿ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಭಾಗವಹಿಸಿದ್ದವು.

ಈ ಸಂದರ್ಭದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಸಿಪಿಐ ಜಿಲ್ಲಾ ಮಂಡಳಿ ಕಾರ್ಯದರ್ಶಿ ಹೆಚ್.ಕೆ.ರಾಮಚಂದ್ರಪ್ಪ, ಕೇಂದ್ರ ಸರಕಾರ ರೈತರ ಬೇಡಿಕೆ ಈಡೇರಿಸಲು ಮುಂದಾಗಿಲ್ಲ. ಹೀಗಾಗಿ ಇಂದು ದೇಶದಾದ್ಯಂತ ರೈತರು, ಕಾರ್ಮಿಕರಿಂದ ಗಣರಾಜ್ಯೋತ್ಸವದಲ್ಲಿ ಟ್ರ್ಯಾಕ್ಟರ್ ಪರೇಡ್ ನಡೆಸಲಾಗಿದೆ ಎಂದು ಹೇಳಿದರು. ಕೃಷಿ, ಕಾರ್ಮಿಕ ಕಾಯ್ದೆಗಳಿಗೆ ತಿದ್ದುಪಡಿ ತರುವ ಮೂಲಕ ಕೇಂದ್ರ ಸರಕಾರ ರೈತ, ಕಾರ್ಮಿಕರ ಬೆನ್ನೆಲುಬು ಮುರಿದಿದೆ. ಬಿಎಸ್ಎನ್ಎಲ್, ಎಲ್ಐಸಿ, ಬಿಎಚ್ಎಲ್, ರೈಲ್ವೆ, ವಿಮಾನ ಖಾಸಗೀಕರಣ ಮಾಡಿರುವ ಸರಕಾರ ಈಗ ನೂತನ ಕೃಷಿ ಕಾಯ್ದೆಗಳ ಮೂಲಕ ಕೃಷಿ ಕ್ಷೇತ್ರವನ್ನು ಬಂಡವಾಳಶಾಹಿಗಳಿಗೆ ವಹಿಸಲು ಹೊರಟಿದೆ. ದೇಶ ಆಳುತ್ತಿರುವ ಜನಪ್ರತಿನಿಧಿಗಳಿಗೆ ಗಣರಾಜ್ಯೋತ್ಸವ ಆಚರಿಸುವ ಯಾವುದೇ ಅರ್ಹತೆ ಇಲ್ಲ ಎಂದು ಕಿಡಿಕಾರಿದರು.

ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ರಾಜಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್, ಕರಾಳ ಕೃಷಿ ಕಾಯ್ದೆ ರದ್ದು ಪಡೆಸುವ ವರೆಗೂ ಹೋರಾಟ ಮುಂದು ವರೆಯಲಿದೆ ಎಂದು ಎಚ್ಚರಿಸಿದರು.

ನೆರಳು ಬೀಡಿ ಕಾರ್ಮಿಕರ ಸಂಘದ ಜಬಿನಾ ಖಾನಂ, ವಿವಿಧ ಸಂಘಟನೆಗಳ ಮುಖಂಡರಾದ ಪೂಜಾರ್ ಅಂಜಿನಪ್ಪ, ಆವರಗೆರೆ ಉಮೇಶ್, ಪಾಲವ್ವನಹಳ್ಳಿ ಪ್ರಸನ್ನಕುಮಾರ್, ಆವರಗೆರೆ ಚಂದ್ರು, ಆನಂದರಾಜ್, ಇ.ಶ್ರೀನಿವಾಸ್, ಆವರಗೆರೆ ವಾಸು, ಐರಣಿ ಚಂದ್ರು, ಕೆ. ಬಾನಪ್ಪ, ದಾಕ್ಷಾಯಣಮ್ಮ ಮಲ್ಲಿಕಾರ್ಜುನ್, ಶಿರಿನ್ ಭಾನು, ಕೊಂಡಜ್ಜಿ ಮಲ್ಲಿಕಾರ್ಜುನ್, ಹೆಗ್ಗೆರೆ ರಂಗಪ್ಪ, ಆಲೂರು ಪುಟ್ಟನಾಯ್ಕ, ಹೂವಿನಮಡು ಅಂಜಿನಪ್ಪ, ರಾಜೇಶ್ವರಿ, ಇಂದ್ರಮ್ಮ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

## ರಥೋತ್ಸವ : ಲಘು ಲಾಠಿ ಪ್ರಹಾರ


(1ನೇ ಪುಟದಿಂದ) ಗಡಿವರೆಗೆ ಮಾತ್ರ ಎಳೆಯಲು ತಾಲ್ಲೂಕು ಆಡಳಿತ ಅನುಮತಿಯನ್ನು ಕೊಟ್ಟಿತ್ತೆನ್ನಲಾಗಿದೆ. ಆದರೆ, ಪ್ರತಿ ವರ್ಷದಂತೆ ನಿಗದಿತ ಸ್ಥಳ (ಗಡಿ) ದ ವರೆಗೆ ರಥವನ್ನು ಎಳೆಯಲು ಮುಂದಾದ ಭಕ್ತರನ್ನು ತಡೆಯಲು ಪೊಲೀಸರು ಸೂಚನೆ ಕೊಟ್ಟಿದ್ದರೂ ಲೆಕ್ಕಿಸದ ಕಾರಣ ಲಾಠಿ ಪ್ರಹಾರ ನಡೆಸಿ ಜನರನ್ನು ಸರಿಸಿದರಾದರೂ, ರಥ ರಸ್ತೆಯ ಬದಿಯ ಅಂಗಡಿಯೊಂದಕ್ಕೆ ನುಗ್ಗಿದೆ ಎಂದು ತಿಳಿದುಬಂದಿದೆ. ಇದರಿಂದಾಗಿ ಬೇರೆ ಊರುಗಳಿಂದ ಸೋಗಿ ಗ್ರಾಮಕ್ಕೆ ತೆರಳಿದ್ದ ಭಕ್ತರು ಆತಂಕದಿಂದ ಹಿಂದಿರುಗಿದರೆಂದು ಗೊತ್ತಾಗಿದೆ.

## ಯುವ ವಿಜ್ಞಾನಿ ಪ್ರಶಸ್ತಿ ಸ್ಪರ್ಧೆ

ದಾವಣಗೆರೆ, ಜ.26- ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಯುವ ವಿಜ್ಞಾನಿ ಪ್ರಶಸ್ತಿಗಾಗಿ 9 ರಿಂದ 12 ನೇ ತರಗತಿಯ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತಿದೆ.

ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ನೆರವಿನೊಂದಿಗೆ, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಪರಿಷತ್ತು ಈ ಪ್ರಶಸ್ತಿ ನೀಡುತ್ತಿದ್ದು, ಆಸಕ್ತರು ಪರಿಷತ್ತಿನ ವೆಬ್‌ಸೈಟ್‌ನಲ್ಲಿ ಅರ್ಜಿ ನಮೂನೆ ಪಡೆಯಬಹುದು. ಅರ್ಜಿಯನ್ನು ಇದೇ ದಿನಾಂಕ 31 ರೊಳಗೆ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಚೇರಿಯಲ್ಲಿ ಸಲ್ಲಿಸುವುದು ಹಾಗೂ ಒಂದು ಪ್ರತಿಯನ್ನು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಬೆಂಗಳೂರಿನ ಕೇಂದ್ರ ಕಚೇರಿಗೆ ಸಲ್ಲಿಸುವುದು. ಜಿಲ್ಲಾ ಮಟ್ಟದ ಸ್ಪರ್ಧೆಯನ್ನು ಫೆಬ್ರವರಿ 6 ರಂದು ಆಯೋಜಿಸಲಾಗುವುದು. ಹೆಚ್ಚಿನ ಮಾಹಿತಿಗೆ ಜಿಲ್ಲೆಯ ಕಾರ್ಯಕ್ರಮ ಸಂಯೋಜಕ ಡಾ. ಸಿದ್ದಪ್ಪ ಭೀ ಕಕ್ಕಳಮೇಲಿ, ದಾವಣಗೆರೆ ವಿವಿ ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರು (70197 15190), ಶಿಕ್ಷಣ ಇಲಾಖೆ ವಿಜ್ಞಾನ ವಿಷಯ ಪರಿವೀಕ್ಷಕರಾದ ಬಿ. ವಸಂತಕುಮಾರಿ (9481867596) ಸಂಪರ್ಕಿಸಬಹುದು.

## ನಗರದಲ್ಲಿ ದೇವಸ್ಥಾನಕ್ಕೆ ಭೂಮಿ ಪೂಜೆ



ದಾವಣಗೆರೆ,ಜ.26- ಶ್ರೀ ವೀರ ಮದಕರಿ ನಾಯಕ ವೃತ್ತದ ಬಳಿ ನಿರ್ಮಿಸಲುದ್ದೇಶಿಸಿರುವ ಶ್ರೀ ಕಟ್ಟೆ ದುರ್ಗಮ್ಮ ದೇವಸ್ಥಾನಕ್ಕೆ ಭೂಮಿ ಪೂಜೆ ಕಾರ್ಯಕ್ರಮವು ನಾಡಿದ್ದು ದಿನಾಂಕ 28ರ ಗುರುವಾರ ಬೆಳಿಗ್ಗೆ 8.30ಕ್ಕೆ ನಡೆಯಲಿದೆ.

# ಪ್ರಜಾ ಶಕ್ತಿಗೆ ಬಲ ತುಂಬಿಸುವ ಕೆಲಸ ಸಾಗಿದೆ



### ಕೊಟ್ಟೂರು ತಹಶೀಲ್ದಾರ್ ಜಿ. ಅನಿಲ್‌ಕುಮಾರ

ಕೊಟ್ಟೂರು, ಜ.26- ಪ್ರಜಾ ಶಕ್ತಿಗೆ ಬಲ ತುಂಬಿಸಿದ ಸಂವಿಧಾನದ ಆಶಯಗಳನ್ನು ಸರ್ಕಾರ ಜಾರಿಗೆಗೊಳಿಸುವ ಮೂಲಕ ಪ್ರಜಾ ಪ್ರಭುತ್ವ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಕೆಲಸ ಮಾಡುತ್ತಿದೆ ಎಂದು ತಹಶೀಲ್ದಾರ್ ಜಿ. ಅನಿಲ್ ಕುಮಾರ್ ಹೇಳಿದರು.

ಪಟ್ಟಣದ ಸರ್ಕಾರಿ ಜ್ಯೂನಿಯರ್ ಕಾಲೇಜ್ ಮೈದಾನದಲ್ಲಿ ತಾಲ್ಲೂಕು ಮಟ್ಟದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರಾಷ್ಟ್ರ ಧ್ವಜಾರೋಹಣವನ್ನು ನೆರವೇರಿಸಿ ಅವರು ಮಾತನಾಡಿದರು.

ವಿಶ್ವಕ್ಕೆ ಮಾದರಿಯಾದ ರಾಷ್ಟ್ರದ ಸಂವಿಧಾನ ಪ್ರತಿಯೊಬ್ಬರ ಹಕ್ಕನ್ನು ರಕ್ಷಿಸುವುದಲ್ಲದೆ, ಸರ್ವ ರಂಗದಲ್ಲಿ ಪ್ರಗತಿಯನ್ನು ಕಾಣುವುದೇ ಪ್ರಮುಖ ಅಂಶವಾಗಿದೆ. ಎಲ್ಲರೂ ಸದೃಢ ರಾಷ್ಟ್ರ ಕಟ್ಟುವ ಕೆಲಸದಲ್ಲಿ ಸಂಪೂರ್ಣ ಕೈಜೋಡಿಸುವತ್ತ ಮುಂದಾಗಬೇಕು ಎಂದು ಅವರು ಕರೆ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶಾಸಕ ಎಸ್. ಭೀಮಾನಾಯ್ಕ ಮಾತನಾಡಿ, ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತರುವ ರೀತಿಯಲ್ಲಿ ಯಾರೊಬ್ಬರು ನಡೆದುಕೊಳ್ಳಬಾರದು. ಅಧಿಕಾರ ಹೊಂದಿದವರು ಸರ್ವರ ಪ್ರಗತಿಗೆ ಶ್ರಮಿಸಬೇಕು. ಪ್ರಜಾಪ್ರಭುತ್ವದ ಹೆಸರಿನಲ್ಲಿ ಸ್ವೇಚ್ಛಾಚಾರದ ನಡವಳಿಕೆ ಸಲ್ಲದು. ಯಾರೊಬ್ಬರೂ ಪ್ರಗತಿಯಿಂದ ಹಿಂದೆ ಬೀಳದಂತೆ ಗಮನ ಹರಿಸಬೇಕಿರುವುದು ಸರ್ಕಾರದ ಆದ್ಯ ಕರ್ತವ್ಯ ಎಂದು ಹೇಳಿದರು.


ಪಥಸಂಚಲನ ನಡೆಸಿದ ಪೊಲೀಸ್, ಗೃಹ ರಕ್ಷಕ ಎನ್.ಸಿ.ಸಿ ಸ್ಕೌಟ್ಸ್, ಶಾಲಾ ವಿದ್ಯಾರ್ಥಿಗಳ ತುಕಡಿಗಳ ತಂಡಗಳು ನೀಡಿದ ಗೌರವ ರಕ್ಷೆಯನ್ನು ತಹಶೀಲ್ದಾರ್ ಜಿ. ಅನಿಲ್‌ಕುಮಾರ, ಶಾಸಕ ಎಸ್. ಭೀಮಾನಾಯ್ಕ, ಸ್ವೀಕರಿಸಿದರು.

ಪತ್ರಕರ್ತ ಭೀಮಣ್ಣ ಗಜಾಪುರ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ತೋರಿದವರನ್ನು ಸನ್ಮಾನಿಸಲಾಯಿತು.

ಜಿ.ಪಂ.ಸದಸ್ಯ ಎಂ.ಎಂ.ಜೆ ಹರ್ಷವರ್ಧನ, ತಾಲ್ಲೂಕು ಪಂಚಾಯ್ತಿ ಅಧ್ಯಕ್ಷ ಗುರುಮೂರ್ತಿ ಶ್ಯಾನುಭೋಗರ, ತಾ.ಪಂ. ಸದಸ್ಯರಾದ ಕೋಚಾಲಿ ಸುಶೀಲಮ್ಮ ವೆಂಕಟೇಶನಾಯ್ಕ, ಅಕ್ಕಮ್ಮ, ಪ.ಪಂ. ಅಧ್ಯಕ್ಷೆ ಭಾರತಿ ಸುಧಾಕರ ಪಾಟೀಲ್, ಕಾಂಗ್ರೆಸ್ ಮುಖಂಡ ಪಿ.ಹೆಚ್. ದೊಡ್ಡರಾಮಣ್ಣ, ಪ.ಪಂ. ಸದಸ್ಯ ಜಗದೀಶ, ಸರ್ಕಲ್ ಇನ್ಸ್‌ಪೆಕ್ಟರ್ ಹೆಚ್. ದೊಡ್ಡಣ್ಣ, ಪ.ಪಂ. ಮುಖ್ಯಾಧಿಕಾರಿ ಹೆಚ್.ಎನ್. ಗೀರೀಶ್ ಇನ್ನಿತರ ಅಧಿಕಾರಿಗಳು ಹಾಗೂ ಗಣ್ಯರು ವೇದಿಕೆಯಲ್ಲಿದ್ದರು.

ಸರ್ಕಾರಿ ಬಾಲಕರ ಪ್ರೌಢಶಾಲೆ ಮುಖ್ಯಶಿಕ್ಷಕ ಸಿ. ಬಸವರಾಜ ಸ್ವಾಗತಿಸಿದರು. ಶಿಕ್ಷಕ ಜೆ.ಎಂ. ಮನೋಹರ ಸ್ವಾಮಿ ನಿರೂಪಿಸಿದರು.


ದ್ವಿತೀಯ ವರ್ಷದ ಪುಣ್ಯಸ್ಮರಣೆ



ದಿ॥ ಶ್ರೀ ಹರಪನಹಳ್ಳಿ ರೇವಣಸಿದ್ದಪ್ಪ

ನೀವು ನಮ್ಮನ್ನಗಲಿ ಇಂದಿಗೆ
ಎರಡು ವರ್ಷಗಳಾದವು.
ನೀವು ಹಾಕಿಕೊಟ್ಟ ಮಾರ್ಗದರ್ಶನ
ನಮಗೆ ದಾರಿ ದೀಪ...
ಸದಾ ನಿಮ್ಮ ಸ್ಮರಣೆಯಲ್ಲಿರುವ.

ಪತ್ನಿ: ನಂಬಕ್ಕ ಮತ್ತು ಮಕ್ಕಳು
ಬಂಧು-ಮಿತ್ರರು ಹಾಗೂ ಹರಪನಹಳ್ಳಿ ವಂಶಸ್ಥರು


### ಶ್ರೀಮತಿ ಶಾಂತಮ್ಮ ನಿಧನ



ಹರಿಹರ ನಗರದ ವಾಸಿ, ಜನತಾವಾಣಿ ಪತ್ರಿಕೆಯ ಏಜೆಂಟರಾದ ಎಸ್. ಶಿವಕುಮಾರ್ ಅವರ ತಾಯಿ ಶ್ರೀಮತಿ ಶಾಂತಮ್ಮ ಅವರು ದಿನಾಂಕ 26.01.2021 ರ ಮಂಗಳವಾರ ಸಂಜೆ 5.50ಕ್ಕೆ ನಿಧನರಾದರು. ಮೂವರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 27.01.2021ರ ಬುಧವಾರ ಬೆಳಿಗ್ಗೆ 11ಕ್ಕೆ ಹರಿಹರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ರಕ್ತದಾನ ಶ್ರೇಷ್ಠದಾನ


## ನಗರಕ್ಕೆ ಇಂದು ಜಗದೀಶ್ ಶೆಟ್ಟರ್



ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಸಾರ್ವಜನಿಕ ಉದ್ದಿಮೆ ಸಚಿವ ಜಗದೀಶ್ ಶೆಟ್ಟರ್ ಅವರು ಇಂದು ನಗರಕ್ಕೆ ಆಗಮಿಸಲಿದ್ದಾರೆ.

ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏರ್ಪಾಡಾಗಿರುವ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಸಂಬಂಧಿಸಿದಂತೆ ಅಧಿಕಾರಿಗಳೊಂದಿಗೆ ಹಾಗೂ ಕೈಗಾರಿಕೋದ್ಯಮಿಗಳೊಂದಿಗಿನ ಸಭೆಯಲ್ಲಿ ಸಚಿವರು ಭಾಗವಹಿಸುವರು. ಮಧ್ಯಾಹ್ನ 2 ಗಂಟೆಗೆ ನಗರದಿಂದ ನಿರ್ಗಮಿಸುವರು.

## ತರಳಬಾಳು ಬಡಾವಣೆಯ ನಿವೃತ್ತ ಮುಖ್ಯೋಪಾಧ್ಯಯ ವೈ.ಜಿ.ಆರ್ ನಿಧನ



ದಾವಣಗೆರೆ, ಜ.26 - ನಗರದ ತರಳಬಾಳು ಬಡಾವಣೆ ವಾಸಿಗಳೂ, ನಿವೃತ್ತ ಮುಖ್ಯೋಪಾಧ್ಯಯರೂ ಆಗಿದ್ದ ವೈ.ಜಿ. ರುದ್ರಪ್ಪ ಅವರು ಮಂಗಳವಾರ ಸಂಜೆ 4 ಗಂಟೆಗೆ ನಿಧನರಾಗಿದ್ದಾರೆ. ಅವರಿಗೆ 73 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಇಬ್ಬರೂ ಪುತ್ರರು, ಓರ್ವ ಪುತ್ರಿಯನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ಚನ್ನಗಿರಿ ತಾಲ್ಲೂಕು ಯರಗಟ್ಟಿಹಳ್ಳಿಯಲ್ಲಿ ನಾಳೆ ದಿನಾಂಕ 27 ರಂದು ಮಧ್ಯಾಹ್ನ 1 ಗಂಟೆಗೆ ನೆರವೇರಲಿದೆ.

# ಕೊರೊನಾದಿಂದ ಹೆಚ್ಚಾದ ಅಸಮಾನತೆ

## ಮಹಾಮಾರಿಯ ಅವಧಿಯಲ್ಲಿ ಅಂಬಾನಿ ಆದಾಯ ಗಂಟೆಗೆ 90 ಕೋಟಿ ರೂ.



ನವದೆಹಲಿ, ಜ. 26 - ಕೌಶಲ್ಯರಹಿತ ಕಾರ್ಮಿಕನೋರ್ವ ಹತ್ತು ಸಾವಿರ ವರ್ಷಗಳಲ್ಲಿ ದುಡಿಯುವುದನ್ನು ರಿಲೈಯನ್ಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಗಂಟೆಯಲ್ಲೇ ದುಡಿಯುತ್ತಾರೆ. ಇಂತಹ ಅಸಮಾನತೆ ಕೊರೊನಾದಿಂದಾಗಿ ಅಸಮಾನತೆ ಏರುಮುಖವಾಗಿದೆ ಎಂದು ವರದಿಯೊಂದು ತಿಳಿಸಿದೆ.

ಆಕ್ಸ್‌ಫಾಮ್ ಇನಿಕ್ವಾಲಿಟಿ ವರದಿಯ ಪ್ರಕಾರ, ಕೊರೊನಾ ಮಹಾಮಾರಿಯಿಂದಾಗಿ ಪ್ರಸಕ್ತ ಇರುವ ಸಾಮಾಜಿಕ, ಆರ್ಥಿಕ ಹಾಗೂ ಲಿಂಗ ತಾರತಮ್ಯ ಹೆಚ್ಚಾಗಿದೆ.

ಶ್ರೀಮಂತರು ಕೊರೊನಾ ಮಹಾಮಾರಿಯ ತೀವ್ರ ಪ್ರಕೋಪದಿಂದ ಪಾರಾಗಿದ್ದಾರೆ. ಕೌಶಲ್ಯದ ಕಾರ್ಮಿಕರು ಸುಲಭವಾಗಿ ತಮ್ಮನ್ನು ತಾವು ಕೊರೊನಾ ತೊಡಕುಗಳಿಂದ ದೂರ ಉಳಿದಿದ್ದಾರೆ ಮತ್ತು ಮನೆಯಿಂದಲೇ ಕೆಲಸ ಮಾಡುತ್ತಿದ್ದಾರೆ. ಆದರೆ, ಬಹುತೇಕ ಭಾರತೀಯರು ಜೀವನಾಧಾರ ಕಳೆದುಕೊಳ್ಳುವ ಅಪಾಯ ಎದುರಿಸಿದ್ದಾರೆ ಎಂದು ವರದಿ ಹೇಳಿದೆ.

ಕೊರೊನಾ ಮಹಾಮಾರಿಯ ಸಂದರ್ಭದಲ್ಲಿ ರಿಲೈಯನ್ಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಅವರು ವಿಶ್ವದ ನಾಲ್ಕನೇ ಶ್ರೀಮಂತ ವ್ಯಕ್ತಿಯಾಗಿದ್ದಾರೆ.

ಕೊರೊನಾ ಸಂದರ್ಭದಲ್ಲಿ ಅಂಬಾನಿ ಪ್ರತಿ ಗಂಟೆಗೆ 90 ಕೋಟಿ ರೂ. ಗಳಿಸಿದ್ದಾರೆ. ಇದೇ ವೇಳೆ ದೇಶದ ಶೇ.24ರಷ್ಟು ಜನರ ಆದಾ ತಿಂಗಳಿಗೆ 3 ಸಾವಿರ ರೂ.ಗಳಿಗೂ ಕಡಿಮೆ ಇತ್ತು ಎಂದು ಆಕ್ಸ್‌ಫಾಮ್ ತಿಳಿಸಿದೆ.

ಅಂಬಾನಿ ಅಷ್ಟೇ ಅಲ್ಲದೇ ಲಾಕ್‌ಡೌನ್ ವೇಳೆ ಭಾರತದ ಕೋಟ್ಯಾಧೀಶರ ಆಸ್ತಿ ಶೇ.35ರಷ್ಟು ಹೆಚ್ಚಾಗಿದೆ. 2009ರ ನಂತರ ಅವರ ಆಸ್ತಿಯಲ್ಲಿ ಶೇ.90ರಷ್ಟು ಏರಿಕೆಯಾಗಿದೆ. ಅವರ ಒಟ್ಟು ಆಸ್ತಿ ಮೌಲ್ಯ ಈಗ 422.9 ಶತ ಕೋಟಿ ಡಾಲರ್ ಎಂದು ಅಂದಾಜಿಸಲಾಗಿದೆ. ಅಮೆರಿಕ, ಚೀನಾ, ಜರ್ಮನಿ, ರಷ್ಯಾ ಹಾಗೂ ಫ್ರಾನ್ಸ್ ನಂತರದಲ್ಲಿ ಭಾರತದ ಕೋಟ್ಯಾಧೀಶರ ಆಸ್ತಿ ಮೌಲ್ಯ ಹೆಚ್ಚಾಗಿದೆ.

ಕೊರೊನಾ ಅವಧಿಯಲ್ಲಿ ಉನ್ನತ 11 ಕೋಟ್ಯಾಧೀಶರ ಆಸ್ತಿ ಮೌಲ್ಯ ಹೆಚ್ಚಾಗಿದ್ದನ್ನು ಪರಿಗಣಿಸಿದರೆ, ಆ ಹಣದಲ್ಲಿ ಉದ್ಯೋಗ ಖಾತ್ರಿ ಇಲ್ಲವೇ ಆರೋಗ್ಯ ಸಚಿವಾಲಯವನ್ನು ಹತ್ತು ವರ್ಷಗಳವರೆಗೆ ನಿಭಾಯಿಸಬಹುದು.

# ರಾಣೇಬೆನ್ನೂರಿನಲ್ಲಿ ರೈತರಿಂದ ಪ್ರತಿಭಟನೆ



ರಾಣೇಬೆನ್ನೂರು, ಜ.26- ಕೃಷಿ ಸುಧಾರಣೆ ನೆಪದಲ್ಲಿ ಜಾರಿಗೆ ತಂದಿರುವ ಮೂರು ಕಾನೂನುಗಳಿಂದ ಕೃಷಿಕನ ಬದುಕು ಹೀನಾಯ ಸ್ಥಿತಿ ತಲುಪಲಿದೆ. ಕೇಂದ್ರ ಸರ್ಕಾರ ಅವುಗಳನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿ ರೈತರು ಪ್ರತಿಭಟನೆ ನಡೆಸಿದರು.

ನವದೆಹಲಿಯಲ್ಲಿ ನಡೆದಿರುವ ರೈತರ ಪ್ರತಿಭಟನೆಗೆ ಇಲ್ಲಿನ ರೈತ ಸಂಘಗಳ ವಿವಿಧ ಬಣಗಳ ಮುಖಂಡರು ತಮ್ಮ ಟ್ರಾಕ್ಟರ್‌ಗಳೊಂದಿಗೆ ಭಾಗವಹಿಸಿದ್ದು, ಕಾಂಗ್ರೆಸ್ ಮುಖಂಡರು ಕೂಡ ಮೆರವಣಿಗೆಯಲ್ಲಿ ಪಾಲ್ಗೊಂಡು ಬೆಂಬಲ ವ್ಯಕ್ತಪಡಿಸಿದರು.

ರೈತ ಮುಖಂಡರುಗಳಾದ ರವೀಂದ್ರಗೌಡ ಪಾಟೀಲ, ಈರಣ್ಣ ಹಲಗೇರಿ, ಹನುಮಂತಪ್ಪ ಕಬ್ಬಾರ, ಜೆಡಿಎಸ್‌ನ ಎಸ್.ಡಿ. ಹಿರೇಮಠ, ಎಪಿಎಂಸಿ ಅಧ್ಯಕ್ಷ ಬಸವರಾಜ ಸವಣೂರ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ನಾಗರಾಜ ಬಣಕಾರ, ಮಾಜಿ ಸಚಿವ ರುದ್ರಪ್ಪ ಲಮಾಣಿ, ಕಾಂಗ್ರೆಸ್ ಅಧ್ಯಕ್ಷ ಮಂಜನಗೌಡ ಪಾಟೀಲ, ಮುಖಂಡರುಗಳಾದ ಪ್ರಕಾಶ ಕೋಳಿವಾಡ, ಸೀತಾರಾಮರೆಡ್ಡಿ, ವೆಂಕಟೇಶ ಬಣಕಾರ, ಇಕ್ಬಾಲ್ ರಾಣೇಬೆನ್ನೂರು, ಬಸವರಾಜ ಕೊಂಗಿ, ಲಿಂಗರಾಜ ಕೋಡಿಹಳ್ಳಿ, ಕಿರಣ ಮಾಂಡ್ರೆ, ಎಲ್ಲಪ್ಪ ರಡ್ಡೇರ, ವಿ.ಪಿ. ಪೋಲಿಸಗೌಡ್ರ ಭಾಗವಹಿಸಿದ್ದರು.

ಸುಮಾರು 3 ಕಿ.ಮೀ. ದೂರದಿಂದ ತಹಶೀಲ್ದಾರ್ ಕಛೇರಿವರೆಗೆ ನಡೆದ ರ‍್ಯಾಲಿಯಲ್ಲಿ ನೂರಾರು ಟ್ರಾಕ್ಟರ್‌ಗಳು, ಬೈಕ್‌ಗಳು, ರೈತ ಹಾಗೂ ಕಾಂಗ್ರೆಸ್ ಮುಖಂಡರು ಪಾದಯಾತ್ರೆಯಲ್ಲಿ ನಡೆದು ತಹಶೀಲ್ದಾರರ ಮೂಲಕ ಪ್ರಧಾನಿ ಹಾಗೂ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

### ಮುಸ್ಲಿಮರ ಪರ ರೈತರಿದ್ದೇವೆ

ನಾವು ಅನಾದಿ ಕಾಲದಿಂದಲೂ ಆಕಳನ್ನು ಪೂಜಿಸುತ್ತಿದ್ದೇವೆ. ಮುಸ್ಲಿಂಮರನ್ನು ವಿರೋಧಿಸುವ ರಾಜಕಾರಣ ಮಾಡಲು ಗೋ ಹತ್ಯೆ ಕಾಯ್ದೆ ತಂದಿರುವುದು ಖಂಡನೀಯ. ನಾವು ಬೆಳೆದ ಹಣ್ಣು ಹಂಪಲು, ತರಕಾರಿಗಳನ್ನು ಗಾಡಿಗಳಲ್ಲಿ ಮಾರಾಟ ಮಾಡುವ ಮುಸ್ಲಿಂಮರ ಪರ ರೈತರಿದ್ದೇವೆ ಎಂದು ಈರಣ್ಣ ಹಲಗೇರಿ ಹೇಳಿದರು.

### ಮಠಾಧೀಶರ ಮೌನ...

ಚಕ್ಕಡಿಗಳಲ್ಲಿ ಕಲ್ಲು ಮಣ್ಣು ಹೇರಿ ಮಠಗಳನ್ನು ಕಟ್ಟಿದವರು ರೈತರು. ಮಠಗಳಿಗೆ ಸುಣ್ಣ ಬಣ್ಣ ಹಚ್ಚಲು ನೆರವಾದ ಸರ್ಕಾರ, ರಾಜಕಾರಣಿಗಳ ಪರವಾಗಿ ಮಠಾಧೀಶರು ನಿಂತಂತೆ ಕಾಣುತ್ತಿದೆ. ನಮಗೆ ಆಗುತ್ತಿರುವ ತೊಂದರೆಗೆ ಯಾವ ಮಠಾಧೀಶರು ಮಾತನಾಡದಿರುವುದು ರೈತ ಸಮೂಹಕ್ಕೆ ನೋವುಂಟು ಮಾಡಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಈರಣ್ಣ ಹಲಗೇರಿ ಬೇಸರ ವ್ಯಕ್ತಪಡಿಸಿದರು.

## ಚಿತ್ರದುರ್ಗ, ಜಗಳೂರಿಗೆ ಇಂದು ಸಂಸದ ಜಿ.ಎಂ.ಸಿದ್ದೇಶ್ವರ

ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಇಂದು ಬೆಳಿಗ್ಗೆ 10 ಗಂಟೆಗೆ ಚಿತ್ರದುರ್ಗದಲ್ಲಿ ರಾಜ್ಯ ಬಿಜೆಪಿ ಯುವ ಮೋರ್ಚಾ ಕಾರ್ಯಕಾರಿಣಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಬೆಳಿಗ್ಗೆ 11.30 ಕ್ಕೆ ಜಗಳೂರು ಪಟ್ಟಣದಲ್ಲಿ ಜನಸ್ಪಂದನ ಕಾರ್ಯಕ್ರಮ ಮತ್ತು ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು.

## ಇಂದಿನಿಂದ ಉತ್ಸವಾಂಬ ಜಾತ್ರೋತ್ಸವ

ವಸಂತ ರಸ್ತೆಯ ಹಾಲಸ್ವಾಮಿ ಪ್ರಿಂಟಿಂಗ್ ಪ್ರೆಸ್ ಹಿಂಭಾಗದಲ್ಲಿರುವ ಶ್ರೀ ಉತ್ಸವಾಂಬದೇವಿ, ಶ್ರೀ ಚೌಡೇಶ್ವರಿ ದೇವಿ, ಶ್ರೀ ಗಣೇಶ, ಶ್ರೀ ಆದಿಶಕ್ತಿ, ಶ್ರೀ ಮಹಾಲಕ್ಷ್ಮಿ ದೇವಿ ದೇವರುಗಳ ಜಾತ್ರೆ ಇಂದಿನಿಂದ ಇದೇ ದಿನಾಂಕ 28 ರವರೆಗೆ ನಡೆಯಲಿದೆ.

## ಮಕ್ಕಳ ಲೋಕದಲ್ಲಿ ಸಿದ್ಧಗಂಗಾ ಶ್ರೀಗಳಿಗೆ ಗುರು ನಮನ

ದಾವಣಗೆರೆ, ಜ.26- ನಿಟುವಳ್ಳಿಯ ಶ್ರೀ ಸಿದ್ಧಗಂಗಾ ಮಕ್ಕಳ ಲೋಕದ ಮಕ್ಕಳು ಶ್ರೀ ಸಿದ್ಧಗಂಗಾ ಶ್ರೀಗಳಿಗೆ ಗುರು ನಮನ ಸಲ್ಲಿಸಿದರು.

ತಾಲ್ಲೂಕು ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಶ್ರೀಗಳ ಬಹುಮುಖ ಸೇವೆಯನ್ನು ಸ್ಮರಿಸಿದರು.

ಯುವ ಗಾಯಕ ಮಾಗನೂರ ಬಸಪ್ಪ ಕಾಲೇಜು ವಿದ್ಯಾರ್ಥಿ ವರುಣ್ ವಿ. ಗೌಡಗೆ ಮಕ್ಕಳ ಲೋಕದ ಸಂಸ್ಥಾಪಕ ಕೆ.ಎನ್. ಸ್ವಾಮಿ ಸಂಗೀತ ಸಾಮ್ರಾಟ್ ಪ್ರಶಸ್ತಿ ಪ್ರದಾನ ಮಾಡಿದರು.

ತಾಲ್ಲೂಕು ಕಸಾಪ ಕಚೇರಿ ಕಾರ್ಯದರ್ಶಿ ಬಿ.ಎಂ. ಮುರಿಗೆಯ್ಯ ಬಹುಮಾನದ ಪ್ರಾಯೋಜಕತ್ವ ವಹಿಸಿದ್ದರು. ಕೂಲಂಬಿ ಜಗದೀಶ್ ಅತಿಥಿಯಾಗಿ ಆಗಮಿಸಿದ್ದರು. ವಿಶೇಷ ಸಂಗೀತ ಸೇವೆಯನ್ನು ಕರ್ನಾಟಕ ಜನಪದ ಅಕಾಡೆಮಿ ಸದಸ್ಯರು, ಮಕ್ಕಳ ಲೋಕದ ಪ್ರಾಚಾರ್ಯರೂ ಆದ ರುದ್ರಾಕ್ಷಿ ಬಾಯಿ ಮತ್ತು ಸಂಗಡಿಗರು ನಡೆಸಿಕೊಟ್ಟರು.

ಬಸವನ ಬಾಗೇವಾಡಿ ಸಾಂಸ್ಕೃತಿಕ ಸಂಸ್ಥೆಯ ಸ್ಥಾಪಕರಾದ ರುಕ್ಮಾಬಾಯಿ ವಚನಗಳನ್ನು ಹಾಡಿದರು. ಸಂಸ್ಥೆ ಅಧ್ಯಕ್ಷ ಎನ್. ಪುಟ್ಟಾನಾಯ್ಕ ಸ್ವಾಗತಿಸಿದರು. ಎಸ್.ಎಸ್. ಆಸ್ಪತ್ರೆ ತಂತ್ರಜ್ಞ ವೆಂಕಟೇಶ್ ಕಾರ್ಯಕ್ರಮ ನಡೆಸಿಕೊಟ್ಟರು.

# ದೇಶದ ಆರ್ಥಿಕ ಪುನಶ್ಚೇತನಕ್ಕೆ ವಿದ್ಯಾರ್ಥಿಗಳೂ ಸ್ಪಂದಿಸಬೇಕಿದೆ : ಡಾ. ಎಂ.ಜಿ. ಈಶ್ವರಪ್ಪ



ದಾವಣಗೆರೆ, ಜ.26- ಕೊರೊನಾದಿಂದಾಗಿ ಕುಸಿತ ಕಂಡ ಭಾರತದ ಆರ್ಥಿಕತೆ ಪುನಶ್ಚೇತನಗೊಳ್ಳುವಲ್ಲಿ ದೇಶದ ಪ್ರತಿಯೊಬ್ಬ ಪ್ರಜೆಯ ಪಾತ್ರವೂ ಮಹತ್ತರವಾಗಿದ್ದು, ತಾಂತ್ರಿಕ ಮತ್ತು ತಂತ್ರಜ್ಞಾನ ವಿದ್ಯಾರ್ಥಿಗಳೂ ಇದನ್ನು ಗಮನದಲ್ಲಿಟ್ಟುಕೊಂಡು ಕಾರ್ಯಗೈಯಬೇಕಿದೆ ಎಂದು ಜಾನಪದ ತಜ್ಞ ಡಾ. ಎಂ.ಜಿ. ಈಶ್ವರಪ್ಪ ಹೇಳಿದರು.

ನಗರದ ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದ ಬಾಲಕರ ಹಾಸ್ಟೆಲ್ ಆವರಣದಲ್ಲಿ ಭಾರತದ 72ನೇ ಗಣರಾಜ್ಯೋತ್ಸವ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ರಾಷ್ಟ್ರಾಭಿಮಾನದೊಂದಿಗೆ ಸಂವಿಧಾನಬದ್ಧವಾಗಿ ವ್ಯವಹರಿಸುತ್ತಾ ರಾಷ್ಟ್ರೋನ್ನತಿಗೆ ಎಲ್ಲರೂ ಕಾರಣರಾಗಬೇಕಿದೆ ಎಂದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಬಾಪೂಜಿ ವಿದ್ಯಾಸಂಸ್ಥೆಯ ಅಧ್ಯಕ್ಷ ಆರ್. ರಮಾನಂದ್ ಮಾತನಾಡಿ, ದೇಶದ ಸ್ವಾತಂತ್ರ್ಯಕ್ಕಾಗಿ ಜೈಲು ಶಿಕ್ಷೆ ಅನುಭವಿಸಿದ, ಜೀವವನ್ನೇ ತೆತ್ತ ತ್ಯಾಗ ಬಲಿದಾನಿಗಳನ್ನು ಸ್ಮರಿಸುತ್ತಾ ಸಂವಿಧಾನದ ಆಶಯಗಳಿಗನುಗುಣವಾಗಿ ಕರ್ತವ್ಯ ನಿರ್ವಹಿಸುವ ಸಂಕಲ್ಪ ಮಾಡುವ ದಿನವಿದು ಎಂದರು.

ಮಹಾವಿದ್ಯಾಲಯ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್, ಹಾಸ್ಟೆಲ್ ವಾರ್ಡನ್ ಡಾ. ಜಿ. ಮಾನವೇಂದ್ರ, ಉಪ ವಾರ್ಡನ್‌ಗಳಾದ ಡಾ. ಎನ್. ಬಸವರಾಜ್, ಡಾ. ವೀಣಾ ಕುಮಾರ್, ವ್ಯವಸ್ಥಾಪಕ ರುದ್ರಪ್ಪ, ಡಾ. ಎಸ್. ಸುರೇಶ್, ಡಾ. ಜಿ.ಪಿ. ದೇಸಾಯಿ, ಕಾಂತೇಶ್, ಚನ್ನಪ್ಪ, ಕರಿಬಸಪ್ಪ ಮುಂತಾದವರು ಉಪಸ್ಥಿತರಿದ್ದರು.

ಸಾಯಿಕಿರಣ್ ದೇಶಭಕ್ತಿ ಗೀತೆಯೊಂದಿಗೆ ಸ್ವಾಗತಿಸಿದರು. ಶ್ರವಣ್ ಪರಿಚಯ ಭಾಷಣ ಮಾಡಿದರೆ, ಪೂಜಾ ಬಿ.ಎಸ್. ವಂದಿಸಿದರು.

## ಬಡ್ತಿ ಮುಖ್ಯ ಶಿಕ್ಷಕರ ಸಂಘಕ್ಕೆ ಆಯ್ಕೆ

ದಾವಣಗೆರೆ, ಜ.26- ಜಿಲ್ಲಾ ಬಡ್ತಿ ಮುಖ್ಯಶಿಕ್ಷಕರ ಸಂಘದ ಅಧ್ಯಕ್ಷರಾಗಿ ಜಿ. ಹುಚ್ಚಪ್ಪ (ದಾವಣಗೆರೆ ದಕ್ಷಿಣ) ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಹೆಚ್. ಮಲ್ಲಿಕಾರ್ಜುನಪ್ಪ (ಹರಿಹರ), ಮಹಿಳಾ ಉಪಾಧ್ಯಕ್ಷರಾಗಿ ಎ.ಟಿ. ಪ್ರೇಮಕುಮಾರಿ (ದಾವಣಗೆರೆ ಉತ್ತರ), ಪ್ರಧಾನ ಕಾರ್ಯದರ್ಶಿ ಎಂ. ವೆಂಕ ಟೇಶ್ (ಹರಿಹರ), ಖಜಾಂಚಿ ಸಿ.ಹೆಚ್. ಕೃಷ್ಣಮೂರ್ತಿ (ದಾವ ಣಗೆರೆ ದಕ್ಷಿಣ), ಸಹ ಕಾರ್ಯ ದರ್ಶಿ ಗೋಪಾಲ ನಾಯ್ಕ (ಜಗಳೂರು), ಮಹಿಳಾ ಸಹ ಕಾರ್ಯದರ್ಶಿ ಯಲ್ಲಮ್ಮ ಶಾನವಾಡ (ದಾವಣಗೆರೆ ಉತ್ತರ) ಅವರನ್ನು ಆಯ್ಕೆ ಮಾಡಲಾಗಿದೆ.

# ಮುಂದಿನ ಪೀಳಿಗೆಗಾಗಿ ನಾವು ಪರಿಸರ ಉಳಿಸೋಣ

## ಹರಪನಹಳ್ಳಿ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಶಾಸಕ ಜಿ.ಕರುಣಾಕರ ರೆಡ್ಡಿ



ಹರಪನಹಳ್ಳಿ, ಜ.26- ದೇಶದಲ್ಲಿ ದಿನದಿಂದ ದಿನಕ್ಕೆ ಜನಸಂಖ್ಯೆ ಹೆಚ್ಚಳವಾಗುತ್ತಿದ್ದು, ಪರಿಸರ ಉಳಿಸಲು ಅರಣ್ಯೀಕರಣ ಹಾಗೂ ನೀರನ್ನು ಉಳಿಸುವ ಮೂಲಕ ಮುಂದಿನ ಪೀಳಿಗೆಗೆ ಸಹಾಯ ಮಾಡುವ ಅಗತ್ಯತೆ ಇದೆ ಎಂದು ಶಾಸಕ ಜಿ.ಕರುಣಾಕರ ರೆಡ್ಡಿ ಹೇಳಿದರು.

ಪಟ್ಟಣದ ತಾಲ್ಲೂಕು ಕ್ರೀಡಾಂಗಣದಲ್ಲಿ 72ನೇ ಗಣರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಾನು ಶಾಸಕನಾಗಿ ಬಂದ ಮೇಲೆ ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ನೀರಿನ ಸಮಸ್ಯೆ ಮನಗಂಡು ಆ ಗ್ರಾಮಗಳಿಗೆ ಬೋರ್‌ವೆಲ್ ಹಾಕಿಸಿದ್ದರಿಂದ ನೀರಿನ ಬವಣೆ ಕಡಿಮೆಯಾಗಿದೆ ಎಂದು ಹೇಳಿದರು.

ತಾಲ್ಲೂಕಿನ ಎಲ್ಲಾ ಕೆರೆಗಳಿಗೆ ನೀರು ತುಂಬಿಸುವ ಕಾಮಗಾರಿ ಭರದಿಂದ ಸಾಗಿದೆ. ನೂತನವಾಗಿ ಆಯ್ಕೆಯಾದ ಗ್ರಾಮ ಪಂಚಾಯಿತಿ ಸದಸ್ಯರುಗಳು ಕೆರೆಗೆ ನೀರು ಬರುವುದಕ್ಕೂ ಮುನ್ನ ಕೆರೆಯಲ್ಲಿರುವ ಹೂಳು ತೆಗೆಸಿದರೆ ನೀರು ನಿಲ್ಲುತ್ತದೆ ಎಂದು ಸಲಹೆ ನೀಡಿದರು.

ದೇಶದ ಸ್ವಾತಂತ್ರ್ಯ ಪಡೆಯಲು ಅನೇಕ ಮಹನೀಯರು ತಮ್ಮ ಪ್ರಾಣ ತ್ಯಾಗ ಮಾಡಿದ್ದಾರೆ. ಸರ್ವರಿಗೂ ನ್ಯಾಯ ಸಿಗುವ ನಿಟ್ಟಿನಲ್ಲಿ ಅಧಿಕಾರಿಗಳು ಗ್ರಾಮೀಣರ ಮನೆ ಬಾಗಿಲಿಗೆ ಸರ್ಕಾರದ ಸವಲತ್ತುಗಳನ್ನು ಮುಟ್ಟಿಸುವ ಕೆಲಸ ಮಾಡಲು ಶೀಘ್ರವೇ ಬರಲಿದ್ದಾರೆ ಎಂದರು.


ಉಪವಿಭಾಗಾಧಿಕಾರಿ ಪ್ರಸನ್ನಕುಮಾರ್ ವಿ.ಕೆ. ಮಾತನಾಡಿ, ದೇಶದ ಐಕತ್ಯೆ ಮತ್ತು ಸಮಗ್ರತೆಯನ್ನು ಎತ್ತಿ ಹಿಡಿಯುವುದು ಸಂವಿಧಾನದ ಅಶಯವಾಗಿದ್ದು, ಪ್ರತಿಯೊಬ್ಬರೂ ಸಂವಿಧಾನದ ಅಶಯದಂತೆ ನಡೆದುಕೊಂಡರೆ ಯಾವುದೇ ಸಮಸ್ಯೆಗಳು ಬರುವುದಿಲ್ಲ ಎಂದರು.

ತೆಲಗಿ ಜಿಲ್ಲಾ ಪಂಚಾಯಿತಿ ಸದಸ್ಯರಾದ ಜಯಶೀಲ ಕೆ.ಆರ್. ಮಾತನಾಡಿ, ವಿಶ್ವದಲ್ಲೆ ಅಗ್ರಗಣ್ಯ ರಾಷ್ಟವೆಂದರೆ ಅದು ವಿವಿಧತೆಯಲ್ಲಿ ಏಕತೆ ಕಾಣುವ ಭಾರತ ಎಂದರು.

ಡಿವೈಎಸ್ಪಿ ವಿ.ಎಸ್ ಹಾಲುಮೂರ್ತಿ ರಾವ್, ಕಂಚಿಕೇರಿ ಜಿಲ್ಲಾ ಪಂಚಾಯಿತಿ ಸದಸ್ಯ ಡಿ. ಸಿದ್ದಪ್ಪ, ತಹಶಿಲ್ದಾರ್ ನಂದೀಶ ಎಲ್.ಎಂ. ಮಾತನಾಡಿದರು.

ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾದ ಅನ್ನಪೂರ್ಣಮ್ಮ, ಉಪಾಧ್ಯಕ್ಷ ಮಂಜಾನಾಯ್ಕ, ಪುರಸಭೆ ಅಧ್ಯಕ್ಷ ಮಂಜುನಾಥ್ ಇಜಂತಕರ್, ಉಪಾಧ್ಯಕ್ಷ ಎನ್. ಭೀಮವ್ವ ಸಣ್ಣಹಾಲಪ್ಪ, ಬಿಜೆಪಿ ತಾಲ್ಲೂಕು ಅಧ್ಯಕ್ಷ ಸತ್ತೂರು ಹಾಲೇಶ್, ಉಪಾಧ್ಯಕ್ಷ ನಿಟ್ಟೂರು ಸಣ್ಣ ಹಾಲಪ್ಪ, ಜಿಲ್ಲಾ ಬಿಜೆಪಿ ಎಸ್.ಟಿ. ಘಟಕದ ಕಾರ್ಯದರ್ಶಿ ಆರ್. ಲೋಕೇಶ್, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಸಿದ್ದಲಿಂಗನಗೌಡ, ಮುಖಂಡ ರಾದ ಎಂ.ಪಿ.ನಾಯ್ಕ, ಆರ್. ಕರೇಗೌಡ, ಯಡಿಹಳ್ಳಿ ಶೇಖರಪ್ಪ, ಬಾಗಳಿ ಕೊಟ್ರೇಶಪ್ಪ, ಉಪನ್ಯಾಸಕ ಉಚ್ಚರಾಯಪ್ಪ, ಇ.ಓ. ಬಿ.ಎಲ್. ಈಶ್ವರ ಪ್ರಸಾದ್, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಎಂ. ವೀರಭದ್ರಯ್ಯ, ಶಿಕ್ಷಣ ಸಂಯೋಜಕ ಗಿರಜ್ಜಿ ನಾಗರಾಜ, ಪುರಸಭೆ ಮುಖ್ಯಾಧಿಕಾರಿ ಬಿ.ಆರ್. ನಾಗರಾಜನಾಯ್ಕ, ಸಮಾಜ ಕಲ್ಯಾಣಾಧಿಕಾರಿ ಆನಂದ ಡೊಳ್ಳಿನ್ ಸೇರಿದಂತೆ ಇತರರಿದ್ದರು.

## ಸಿ.ವಿ. ರಾಮನ್ ವಿಜ್ಞಾನ ರಸಪ್ರಶ್ನೆ ಜಿಲ್ಲಾ ಸಂಯೋಜಕರಾಗಿ ಅಶ್ವಿನಿ ಆಯ್ಕೆ



ದಾವಣಗೆರೆ, ಜ.26- ಸಿ.ವಿ. ರಾಮನ್ ವಿಜ್ಞಾನ ರಸಪ್ರಶ್ನೆ ಸ್ಪರ್ಧೆಯ ಜಿಲ್ಲಾ ಸಂಯೋಜಕರಾಗಿ ಜಿ.ಟಿ. ಅಶ್ವಿನಿ ಅವರನ್ನು ಆಯ್ಕೆ ಮಾಡಲಾಗಿದೆ.

ಕರ್ನಾಟಕ ಜ್ಞಾನ-ವಿಜ್ಞಾನ ಸಮಿತಿ ವತಿಯಿಂದ ಫೆ. 28 ರಂದು ನಡೆಯುವ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ 8, 9, 10ನೇ ತರಗತಿಯ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ವಿಜ್ಞಾನ ರಸಪ್ರಶ್ನೆ ಸ್ಪರ್ಧೆ ಫೆ. 14 ರಂದು ನಡೆಯಲಿದೆ. ಫೆ. 10 ರೊಳಗಾಗಿ ಜಿ.ಟಿ. ಅಶ್ವಿನಿ (97396-30606) ಇವರಲ್ಲಿ ಹೆಸರು ನೋಂದಾಯಿಸಿಕೊಳ್ಳುವಂತೆ ಕೋರಲಾಗಿದೆ.


## ಉದ್ಯಮಶೀಲತಾ ಕೌಶಲ್ಯಾಭಿವೃದ್ಧಿ ತರಬೇತಿ

ದಾವಣಗೆರೆ, ಜ.26- ಜಿಲ್ಲೆಯ ಸಿಡಾಕ್ - ಉದ್ಯಮಶೀಲತಾ ಮಾರ್ಗದರ್ಶನ ಕೇಂದ್ರದಿಂದ ಸ್ವಂತ ಉದ್ಯಮ ಪ್ರಾರಂಭಿಸಿ, ಸ್ವಾವಲಂಬಿ ಗಳಾಗಲು ಇಚ್ಛಿಸುವ ಜಿಲ್ಲೆಯ ಪುರುಷ, ಉದ್ಯಮಾಕಾಂಕ್ಷಿಗಳಿಗೆ 30 ದಿನ ಗಳ (ವಸತಿ ರಹಿತ) ಮೊಬೈಲ್ ಹ್ಯಾಂಡ್‌ಸೆಟ್ ರಿಪೇರಿ ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ಉದ್ಯಮಶೀಲತಾ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯ ಕ್ರಮವನ್ನು ಫೆಬ್ರವರಿ ತಿಂಗಳ ಎರಡನೇ ವಾರದಲ್ಲಿ ನಡೆಸಲಾಗುವುದು. ವಿವರಗಳಿಗಾಗಿ ಸವಿತ, ಸಿಡಾಕ್ ತರಬೇತುದಾರರು (9035229821) ಇವರನ್ನು ಸಂಪರ್ಕಿಸಬಹುದು. ಅರ್ಜಿ ಸಲ್ಲಿಸಲು ಫೆಬ್ರವರಿ 1 ಕೊನೆಯ ದಿನವಾಗಿದೆ.

## ಪಾಲಿಹೌಸ್/ ನೆರಳು ಪರದೆ ಸೌಲಭ್ಯಕ್ಕಾಗಿ ಅರ್ಜಿ

ದಾವಣಗೆರೆ, ಜ.26- ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ದಾವಣಗೆರೆ ಜಿಲ್ಲೆಯಲ್ಲಿನ ಪರಿಶಿಷ್ಟ ಪಂಗಡದವರಿಗೆ ಪಾಲಿಹೌಸ್/ ನೆರಳು ಪರದೆ ನಿರ್ಮಾಣ ಸೌಲಭ್ಯಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಪರಿಶಿಷ್ಟ ಪಂಗಡದವರು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕೊಠಡಿ ಸಂಖ್ಯೆ: 45 ಎರಡನೇ ಮಹಡಿ, ಜಿಲ್ಲಾ ಆಡಳಿತ ಭವನ, ಕರೂರು ರಸ್ತೆ, ದಾವಣಗೆರೆ ಇಲ್ಲಿ ಅರ್ಜಿ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಬರುವ ಫೆಬ್ರವರಿ 6 ರೊಳಗೆ ಸಲ್ಲಿಸುವಂತೆ ಇಲಾಖೆ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.


## ಜನ್ಮದಿನದ ಶುಭಾಶಯಗಳು



ಇಂದು ಜನ್ಮದಿನದ ಸಂಭ್ರಮದಲ್ಲಿರುವ
ಮಂಡಿಪೇಟೆಯ ಗಣೇಶ್ ಜ್ಯೂಯಲರ್ಸ್ ಮಾಲೀಕರೂ,
ನಮ್ಮ ಪ್ರೀತಿಯ ಅಣ್ಣ, ಮಾರ್ಗದರ್ಶಕರು, ಶ್ರಮಜೀವಿಗಳು,
ಸಹನಾಮೂರ್ತಿ
**ಶ್ರೀ ವೇಣುಗೋಪಾಲ್ (ದೊರೆ)** ರವರಿಗೆ
ಜನ್ಮದಿನದ ಹಾರ್ದಿಕ ಶುಭಾಶಯಗಳು


**ಗಣೇಶ್ ಜ್ಯೂಯಲರಿ ಮಾರ್ಟ್, ಚಿನ್ನ- ಬೆಳ್ಳಿ ಕೆಲಸಗಾರರು ಹಾಗೂ ಸಿಬ್ಬಂದಿ ವರ್ಗ, ಮಂಡಿಪೇಟೆ, ದಾವಣಗೆರೆ.**





## ದಿ ದಾವಣಗೆರೆ ಕ್ಲಬ್ (ರಿ.), ದಾವಣಗೆರೆ.

**ದಿನಾಂಕ 31.01.2021ನೇ ಭಾನುವಾರ ನಡೆಯಲಿರುವ 2020-21 ರಿಂದ 2022-23 ನೇ ಸಾಲಿಗೆ (3 ವರ್ಷ ಅವಧಿಗೆ) ಮಾನ್ಯ ಶ್ರೀ ಯು.ಜಿ. ಶಿವಕುಮಾರ್ ಇವರ ನೇತೃತ್ವದಲ್ಲಿ ಕಾರ್ಯಕಾರಿ ಮಂಡಳಿಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಪಟ್ಟಿ ಮತ್ತು ಚಿಹ್ನೆಗಳ ವಿವರ**


ಅಧ್ಯಕ್ಷರ ಸ್ಥಾನಕ್ಕೆ :-

| ಕ್ರ.ಸಂ. | ಉಮೇದುದಾರರ ಹೆಸರು | ಚಿಹ್ನೆ | ಗುರುತು |
|---|---|---|---|
| 1 | | | |
| 2 | ಶಿವಕುಮಾರ ಯು.ಜಿ.  |  | |


ಉಪಾಧ್ಯಕ್ಷರ ಸ್ಥಾನಕ್ಕೆ :-

| ಕ್ರ.ಸಂ. | ಉಮೇದುದಾರರ ಹೆಸರು | ಚಿಹ್ನೆ | ಗುರುತು |
|---|---|---|---|
| 1 | | | |
| 2 | | | |
| 3 | ವೀರಣ್ಣ ಐ.ವಿ. (ಐನಳ್ಳಿ)  |  | |



ಗೌರವ ಕಾರ್ಯದರ್ಶಿ ಸ್ಥಾನಕ್ಕೆ :-

| ಕ್ರ.ಸಂ. | ಉಮೇದುದಾರರ ಹೆಸರು | ಚಿಹ್ನೆ | ಗುರುತು |
|---|---|---|---|
| 1 | ರವಿಶಂಕರ್ ಪಲ್ಲಾಗಟ್ಟೆ  |  | |
| 2 | | | |







ಗೌರವ ಸಹ-ಕಾರ್ಯದರ್ಶಿ ಸ್ಥಾನಕ್ಕೆ :-

| ಕ್ರ.ಸಂ. | ಉಮೇದುದಾರರ ಹೆಸರು | ಚಿಹ್ನೆ | ಗುರುತು |
|---|---|---|---|
| 1 | | | |
| 2 | ನಾಗರಾಜ್ ಕೆ.ಬಿ.  |  | |

ಕೋಶಾಧ್ಯಕ್ಷರ ಸ್ಥಾನಕ್ಕೆ :-

| ಕ್ರ.ಸಂ. | ಉಮೇದುದಾರರ ಹೆಸರು | ಚಿಹ್ನೆ | ಗುರುತು |
|---|---|---|---|
| 1 | ಪುಟ್ಟಪ್ಪ ಕಾಶಿಪುರ  |  | |
| 2 | | | |

ನಿರ್ದೇಶಕರುಗಳ ಸ್ಥಾನಕ್ಕೆ :-

| ಕ್ರ.ಸಂ. | ಉಮೇದುದಾರರ ಹೆಸರು | ಚಿಹ್ನೆ | ಗುರುತು |
|---|---|---|---|
| 1 | ಅಭಿಷೇಕ್ ಬಿ.ಜೆ. (ಬೇತೂರು)  |  | |
| 2 | | | |
| 3 | | | |
| 4 | | | |
| 5 | ತಿಮ್ಮರಾಜ ಗುಪ್ತಾ ಎಸ್.ಕೆ.  |  | |
| 6 | ನಾಗರಾಜ ಬಿ.ಜಿ. (ಬಸವಾಪಟ್ಟಣ)  |  | |
| 7 | | | |
| 8 | | | |
| 9 | ಪಟೇಲ್ ಬಿ.ಪಿ. (ಕಾರಿಗನೂರು ಬಸವೇಶ)  |  | |
| 10 | ಬೆಳ್ಳೂಡಿ ಸದಾನಂದ  |  | |
| 11 | ಮಲ್ಲಿಕಾರ್ಜುನ ಬಾದಾಮಿ  |  | |
| 12 | | | |
| 13 | | | |
| 14 | | | |
| 15 | | | |

**ಕಬ್ಲ್‌ನ ಸರ್ವತೋಮುಖ ಅಭಿವೃದ್ಧಿ ಹಾಗೂ ನಿಮ್ಮ ಸ್ಪಂದನೆಗೆ ಶ್ರಮಿಸಲಿ ನಮ್ಮ ಗುಂಪಿನ 11 ಜನ ಅಭ್ಯರ್ಥಿಗಳಿಗೂ ಮತ ಚಲಾಯಿಸುವುದರ ಮೂಲಕ ಆಶೀರ್ವದಿಸಿ ಜಯಶೀಲರನ್ನಾಗಿ ಮಾಡಲು ವಿನಮ್ರ ವಿನಂತಿ ಮಾಡಿಕೊಳ್ಳುತ್ತಿದ್ದೇವೆ.**

**ಮತದಾನ ಸಮಯ : ಬೆಳಿಗ್ಗೆ 9 ರಿಂದ ಮಧ್ಯಾಹ್ನ 3 ಗಂಟೆಯವರೆಗೆ**
**ಮತದಾನದ ಸ್ಥಳ : ದಿ ದಾವಣಗೆರೆ ಕ್ಲಬ್ (ರಿ.), ದಾವಣಗೆರೆ.**


**ಬನ್ನಿ... ಕೈ ಜೋಡಿಸಿ**

*ನಿಮ್ಮ ಮತ, ದಿ ದಾವಣಗೆರೆ ಕ್ಲಬ್ (ರಿ.), ದಾವಣಗೆರೆಗೆ ಹಿತ*

ವಿ.ಸೂ. : ಕಡ್ಡಾಯವಾಗಿ ಮಾಸ್ಕ್ ಧರಿಸಿಕೊಂಡು, ಮತ ಚಲಾಯಿಸಿ.

# ಪಂಚಮಸಾಲಿಗಳು ಕ್ರಾಂತಿಯ ಸ್ವರೂಪ ಗಟ್ಟಿಯಾಗಿ ನಿಂತರೆ ಸರ್ಕಾರ ಬೀಳುವುದು ಖಚಿತ

## ಹರಪನಹಳ್ಳಿ ಕಾರ್ಯಕ್ರಮದಲ್ಲಿ ಶ್ರೀ ಜಯಮೃತ್ಯುಂಜಯ ಸ್ವಾಮೀಜಿ



ಹರಪನಹಳ್ಳಿ, ಜ.26- ಪಂಚಮಸಾಲಿಗಳು ಕ್ರಾಂತಿಯ ಸ್ವರೂಪವಾಗಿದ್ದು, ಗಟ್ಟಿಯಾಗಿ ನಿಂತರೆ ಸರ್ಕಾರವೇ ಬಿದ್ದು ಹೋಗುತ್ತದೆ ಎಂದು ಕೂಡಲ ಸಂಗಮದ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಪಟ್ಟಣದ ಹಳೆ ಬಸ್ ನಿಲ್ದಾಣದಲ್ಲಿ ಪಾದ ಯಾತ್ರೆ ಅಂಗವಾಗಿ ಆಯೋಜಿಸಿದ್ದ ಜನ ಜಾಗೃತಿ ಸಭೆಯ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ, ರಾಜ್ಯ ಸರ್ಕಾರಕ್ಕೆ ಪಾದಯಾತ್ರೆಯ ಕೂಗು ಕೇಳುವುದಿಲ್ಲ. ರಾಷ್ಟ್ರೀಯ ಅಧ್ಯಕ್ಷರ ಹೇಳಿಕೆಯಂತೆ ಕೇಸರಿ ಶಾಲು, ಹಸಿರು ಶಾಲು ಮೇಲೆ ಬಾರಿಕೋಲು ಹಾಕಿಕೊಂಡು ಉಗ್ರ ಚಳವಳಿ ಮಾಡುವ ಮೂಲಕ ದಾವಣಗೆರೆಯಲ್ಲಿ ನಾಂದಿ ಹಾಡುತ್ತೇವೆ. ಯಾವುದೋ ಕಾರಣಕ್ಕೆ ನಮ್ಮ ಧಾರ್ಮಿಕ ಪೀಠಗಳು ದೂರ ಇದ್ದವು, ಆದರೆ ಈ ಮೀಸಲಾತಿ ಹೋರಾಟ ಕೂಡಿಸಿದೆ, ಇದು ಶಾಶ್ವತವಾಗಿ ಕೂಡಿದೆ ಎಂದು ಹೇಳಿದರು. ಈವರೆಗಿನ ಸರ್ಕಾರಗಳು ಮೂಗಿಗೆ ತುಪ್ಪ ಹಚ್ಚುತ್ತಾ ಬಂದಿವೆ, ಆದರೆ, ಯಡಿಯೂರಪ್ಪನವರು ಹಾಗೆ ಮಾಡುವುದಿಲ್ಲ ಎಂಬ ವಿಶ್ವಾಸವಿದೆ. ಹೋರಾಟ ಕ್ರಾಂತಿ ರೂಪ ತಾಳುವುದರಲ್ಲಿ ನ್ಯಾಯ ಒದಗಿಸಿ ಎಂದು ಅವರು, ಕಿತ್ತೂರು ಮಾದರಿ ಕರ್ನಾಟಕ, ವಿಜಯ ನಗರ ಮಾದರಿ ಕರ್ನಾಟಕ ಕಟ್ಟಬೇಕಾಗಿದೆ ಎಂದು ಅವರು ಹೇಳಿದರು.

ಮಾಜಿ ಸಚಿವ ಶಿವರಾಜ ತಂಗಡಗಿ ಮಾತನಾಡಿ, ಲಿಂಗಾಯತ ಪಂಚಮಸಾಲಿ ಸಮಾಜದವರ 2ಎ ಮೀಸಲಾತಿ ಬೇಡಿಕೆ ಆದಷ್ಟು ಬೇಗ ಈಡೇರಿಸಿ ಅವರ ಹೋರಾಟವನ್ನು ನಿಲ್ಲಿಸಿ ಪಂಚಮಸಾಲಿ ಸಮಾಜ ಇನ್ನೂ ಪೂರ್ಣವಾಗಿ ಬೀದಿಗಿಳಿದಿಲ್ಲ, ಶ್ರೀಗಳು ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ ಎಂದರು.

ನೀವು ಕೇಳುತ್ತಿರುವುದು ಮೂಲಭೂತ ಹಕ್ಕುಗಳನ್ನು ಹೊರತು ಬೇರೇನು ಅಲ್ಲ, ನಿಮಗೆ ಇದರ ಅವಶ್ಯಕತೆ ಇದೆ. ನಾವು ನಿಮ್ಮ ಜೊತೆಗಿದ್ದೇವೆ ಎಂದು ಸರ್ಕಾರಕ್ಕೆ ಹೇಳಿದ ಅವರು, ಕೆಪಿಸಿಸಿ ಅಧ್ಯಕ್ಷರು ಹಾಗೂ ವಿಪಕ್ಷ ನಾಯಕರ ಬಳಿ ಈ ಕುರಿತು ಮಾತನಾಡುವೆ, ಅವರೂ ಸಹ ಸರ್ಕಾರಕ್ಕೆ ಒತ್ತಾಯ ಮಾಡುತ್ತಾರೆ ಎಂದು ಹೇಳಿದರು.

ಅಖಿಲ ಭಾರತ ಲಿಂಗಾಯಿತ ಪಂಚಮಸಾಲಿ ಅಧ್ಯಕ್ಷ ಡಾ.ವಿಜಯಾನಂದ ಕಾಶಪ್ಪನವರು, ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ, ಲಿಂಗಾಯಿತ ಪಂಚಮಸಾಲಿ ಸಮಾಜದ ತಾಲ್ಲೂಕು ಅಧ್ಯಕ್ಷ ಪಿ.ಬೆಟ್ಟನಗೌಡ, ಅಕ್ಷರ ಸಿಡ್ಸ್ ಮಾಲೀಕ ಅರಸಿಕೇರಿ ಎನ್.ಕೊಟ್ರೇಶ್, 2ಎ ಮೀಸಲಾತಿ ಸಮಿತಿ ಅಧ್ಯಕ್ಷ ಚಂದ್ರಶೇಖರ್ ಪೂಜಾರ, ಗೌರವಾಧ್ಯಕ್ಷ ಎಂ.ಪರಮೇಶ್ವರಪ್ಪ, ಎಸ್.ಪಿ. ಪ್ರಭಾಕರ್ ಗೌಡ, ಕಂಚಿಕೇರಿ ಎಂ.ಟಿ ಸುಭಾಷ್‌ಚಂದ್ರ, ಟಿ.ಎ.ಪಿ.ಸಿ.ಎಂ ಎಸ್. ಅಧ್ಯಕ್ಷ ಪಿ.ಪ್ರೇಮಾ ಕುಮಾರ್, ಪ್ರಚಾರ ಸಮಿತಿ ಅಧ್ಯಕ್ಷ ಪಿ.ಕರಿಬಸಪ್ಪ, ಕಾರ್ಯದರ್ಶಿ ಬಸವರಾಜ ಅಡವಿಹಳ್ಳಿ, ತಿಮ್ಲಾಪುರ ನಾಗರಾಜ್, ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ. ಸದಸ್ಯರುಗಳಾದ ಪಿ. ರೇಖಮ್ಮ, ಉಮಾ ಶಂಕರ್, ಲೀಲಾ ಲಿಂಗರಾಜ್, ಮುಖಂಡರುಗಳಾದ ಕುಂಚೂರು ವೀರಣ್ಣ, ಶಶಿಧರ ಪೂಜಾರ್, ಮತ್ತಿಹಳ್ಳಿ ಅಜ್ಜಣ್ಣ, ಮಂಜುನಾಥ ಪೂಜಾರ್, ಜೆ. ಓಂಕಾರಗೌಡ, ಬಿ.ಎಸ್.ಲಿಂಗರಾಜ್, ಹಾರಕನಾಳು ಪ್ರಕಾಶ ಗೌಡ, ಎಸ್. ಸುರೇಶ್, ವಿರೇಶ್, ನೀಲಗುಂದ ಸಿದ್ದೇಶ್, ಆರ್.ರೇವಣ್ಣ, ಬಸವರಾಜ್, ಕೆಇಬಿ ಕರಿಬಸಪ್ಪ, ಪರಮೇಶ್, ಎ.ಜಿ.ಕೊಟ್ರಗೌಡ, ಕೊಟ್ರೇಶ್, ಬೆಲೂರು ಸಿದ್ದೇಶ್, ಬೋರ್‌ವೆಲ್ ಶಂಬಣ್ಣ ಸೇರಿದಂತೆ ಇತರರು ಹಾಜರಿದ್ದರು.

# ಜಿ.ಎ.ಜಗದೀಶ್ ಅವರಿಗೆ ರಾಷ್ಟ್ರಪತಿ ಪೊಲೀಸ್ ಪದಕ



ಜಿ.ಎ ಜಗದೀಶ್ ಅವರು, 1985 ನೇ ಇಸವಿಯಲ್ಲಿ ಪೊಲೀಸ್ ಇಲಾಖೆಯಲ್ಲಿ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಆಗಿ ಪಾದಾರ್ಪಣೆ ಮಾಡಿ, ಅತ್ಯುತ್ತಮ ಕಾನೂನು ಶಾಂತಿ ಪಾಲನೆ ಸುವ್ಯವಸ್ಥೆ, ಅಪರಾಧ ಪತ್ತೆ ಮತ್ತು ತಡೆ, ಸುಗಮ ಸಂಚಾರ ಸುವ್ಯವಸ್ಥೆ, ಅತ್ಯುತ್ತಮ ಸಾರ್ವಜನಿಕ ಸಂಬಂಧ, ಹೀಗೆ ಸರ್ವತೋಮುಖವಾಗಿ ಸಾಧನೆಗೈದು ಪೊಲೀಸ್ ಇಲಾಖೆಯಲ್ಲಿ ವಿಶಿಷ್ಟ ಛಾಪು ಮೂಡಿಸಿದ್ದರು. 1999 ರಲ್ಲಿ ಉಡುಪಿಯ ವೃತ್ತದಲ್ಲಿ ಸಿಪಿಐ ಆಗಿದ್ದಾಗ ಶ್ಲಾಘನೀಯ ಸೇವೆಗಾಗಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ ಚಿನ್ನದ ಪದಕಕ್ಕೆ ಭಾಜನರಾಗಿದ್ದರು.

ಜಗದೀಶ್ ಅವರು 2002 ರಿಂದ 2012 ರವರೆಗೆ ದಾವಣಗೆರೆ ನಗರ ಹಾಗೂ ಗ್ರಾಮಾಂತರ ವೃತ್ತದಲ್ಲಿ ಸುಮಾರು 10 ವರ್ಷಗಳ ಕಾಲ ಪೊಲೀಸ್ ವೃತ್ತಾಧಿಕಾರಿಯಾಗಿದ್ದರು. 2005 ರಲ್ಲಿ ದಾವಣಗೆರೆ ಕೇಂದ್ರ ವೃತ್ತದಲ್ಲಿ ಸಿಪಿಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಪೊಲೀಸ್ ಇಲಾಖೆಯಲ್ಲಿ ವೃತ್ತಿಪರ ಕರ್ತವ್ಯ ಹಾಗೂ ಅಸಾಧಾರಣ ಸೇವೆಗಾಗಿ ರಾಷ್ಟ್ರಪತಿ ಪೊಲೀಸ್ ಪದಕ ಪುರಸ್ಕೃತರಾಗಿದ್ದರು.

2013 - 2018 ರಲ್ಲಿ ಬೆಂಗಳೂರು ನಗರದಲ್ಲಿ ಅಸಿಸ್ಟೆಂಟ್ ಪೊಲೀಸ್ ಕಮಿಷನರ್ ಆಗಿ ಸಂಚಾರ ವಿಭಾಗದಲ್ಲಿದ್ದ ಸಂದರ್ಭದಲ್ಲಿ 2018 ಜನವರಿ 26ರ ಗಣರಾಜ್ಯೋತ್ಸವದಂದು 'ವಿಶಿಷ್ಟ ಸೇವೆಗಾಗಿ ರಾಷ್ಟ್ರಪತಿ ಪೊಲೀಸ್ ಪದಕಕ್ಕೆ' ಭಾಜನರಾಗಿದ್ದರು. ಜಗದೀಶ್ ಅವರು ಸಾಹಿತಿಗಳಾಗಿದ್ದು, ಎರಡು ಕವನ ಸಂಕಲನಗಳನ್ನು ಹೊರತಂದಿದ್ದಾರೆ. ಇವರ ಲೇಖನಗಳು ಹಾಗೂ ಕವನಗಳು ರಾಜ್ಯ ಮಟ್ಟದ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಸಾಹಿತ್ಯ ಕೃಷಿಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡು ತಾಲ್ಲೂಕು, ಜಿಲ್ಲಾ, ರಾಜ್ಯ ಮಟ್ಟದ ವಿವಿಧ ಕವಿಗೋಷ್ಠಿಗಳಲ್ಲಿ ಅಧ್ಯಕ್ಷತೆ ವಹಿಸಿ, ವಿವಿಧ ಕಾವ್ಯ ವಾಚನ ಮಾಡಿದ್ದರು. ಜಗದೀಶ್ ಅವರು, 'ಲಾಠಿ ಹಿಡಿಯುವ ಕೈ ಲೇಖನಿಯನ್ನೂ ಹಿಡಿಯಬಲ್ಲದು' ಎಂಬುದನ್ನು ಸಾಬೀತು ಪಡಿಸಿದ್ದರು. ಕೋಟ ಪೊಲೀಸ್ ಠಾಣೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಕಡಲತೀರದ ಭಾರ್ಗವ, ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತರಾದ ಕೋಟಾ ಶಿವರಾಮ ಕಾರಂತರ ನಿಕಟ ಸಂಪರ್ಕ ಹೊಂದಿದ್ದರು.

ಪೊಲೀಸ್ ಇಲಾಖೆಯಲ್ಲಿ 34 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿದ್ದ ಜಗದೀಶ್ ಅವರು ದಾವಣಗೆರೆ ವಲಯ ಭ್ರಷ್ಟಾಚಾರ ನಿಗ್ರಹ ದಳದ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದ ಸಂದರ್ಭದಲ್ಲಿ ದಿನಾಂಕ 30-4-2019 ರಂದು ನಿವೃತ್ತಿ ಹೊಂದಿದ್ದರು.

ಜಿ.ಎ ಜಗದೀಶ್ ಅವರು ಬೆಂಗಳೂರು ರಾಜಭವನದಲ್ಲಿ ಕಳೆದ ವಾರ ನಡೆದ ಸಮಾರಂಭದಲ್ಲಿ ರಾಜ್ಯಪಾಲ ವಜೂಬಾಯಿ ರೂಢಾಭಾಯಿ ವಾಲಾ ಅವರಿಂದ 'ರಾಷ್ಟ್ರಪತಿಯವರ ವಿಶಿಷ್ಟ ಸೇವಾ ಪದಕ' ಪಡೆದಿರುತ್ತಾರೆ. ಸಮಾರಂಭದಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರು ಉಪಸ್ಥಿತರಿದ್ದರು.

# ಹಿಂಸಾಚಾರಕ್ಕೆ ತಿರುಗಿದ ಟ್ರ್ಯಾಕ್ಟರ್ ಪರೇಡ್

**(1ನೇ ಪುಟದಿಂದ)** ದೇಶ ಆಘಾತದಿಂದ ನೋಡಬೇಕಾಯಿತು. ಅಂತಿಮವಾಗಿ ತ್ರಿವರ್ಣ ಧ್ವಜಕ್ಕೆ ಹೆಮ್ಮೆಯ ಪ್ರತೀಕವಾಗಿರುವ ಕೆಂಪು ಕೋಟೆಯ ಮೇಲೆಯೇ ಸಿಖ್ ಧರ್ಮದ ಧ್ವಜ ಹಾರಿಸಿದ್ದು ಅರಾಜಕತೆಯ ಪರಮಾವಧಿಯಾಗಿತ್ತು. ಧ್ವಜಕಂಭವನ್ನು ಏರಿದ ಕೆಲವರು ಸಿಖ್ ಧ್ವಜವಾದ ನಿಶಾನ್ ಸಾಹಿಬ್ ಹಾರಿಸಿದರು. ಇನ್ನು ಕೆಲವರು ಕೆಂಪು ಕೋಟೆಯ ಗೋಪುರಗಳ ಮೇಲೇರಿ ಸಿಖ್ ಧ್ವಜಗಳನ್ನು ಹಾರಿಸಿದ್ದು ಕಂಡು ಬಂತು.

ದಿನವಿಡೀ ಕಂಡು ಬಂದ ಸಂಘರ್ಷ ಸೂರ್ಯ ಮುಳುಗಿದರೂ ಮುಗಿದಿರಲಿಲ್ಲ. ಹಲವಾರು ರಸ್ತೆಗಳಲ್ಲಿ ಅಲೆದಾಡುತ್ತಿದ್ದ ಗುಂಪುಗಳು ಸಂಘರ್ಷ ನಡೆಸುತ್ತಿದ್ದುದು ಕಂಡು ಬಂತು. ಕೆಲ ಗುಂಪುಗಳು ನಿಯೋಜಿತ ಪ್ರತಿಭಟನಾ ಸ್ಥಳಗಳಿಗೆ ಮರಳಿವೆ. ಆದರೆ, ಸಾವಿರಾರು ಸಂಖ್ಯೆಯ ಜನರು ರಾತ್ರಿಯಾದರೂ ದೆಹಲಿ ಬೀದಿ ಬಿಟ್ಟಿರಲಿಲ್ಲ.

ಮೊಘಲ್ ಕಾಲದ ಕೆಂಪು ಕೋಟೆಯ ಮೇಲಿಂದ ಪ್ರಧಾನ ಮಂತ್ರಿ ಸ್ವಾತಂತ್ರ್ಯೋತ್ಸವದ ವೇಳೆ ದೇಶವನ್ನು ಉದ್ದೇಶಿಸಿ ಮಾತನಾಡುತ್ತಾರೆ. ಇಂತಹ ಸ್ಥಳದಲ್ಲಿ ಪ್ರತಿಭಟನಾಕಾರರು ದಾಳಿಕೋರತನದಿಂದ ವರ್ತಿಸುತ್ತಿದ್ದರು. ನಂತರ ಅವರನ್ನು ತೆರವುಗೊಳಿಸಲಾಯಿತು ಎಂದು ವರದಿಗಳು ತಿಳಿಸಿವೆ.

ದೆಹಲಿಯ ಐ.ಟಿ.ಒ.ದಲ್ಲಿ ನೂರಾರು ರೈತರು ಬಡಿಗೆ ಹಿಡಿದು ಪೊಲೀಸರ ಬೆನ್ನತ್ತಿದ ದೃಶ್ಯಗಳು ಕಂಡು ಬಂದವು. ಕೆಲವೆಡೆ ಟ್ರ್ಯಾಕ್ಟರ್‌ಗಳನ್ನು ತಡೆಯಾಗಿ ನಿಲ್ಲಿಸಲಾಗಿದ್ದ ಬಸ್‌ಗಳಿಗೆ ಅಪ್ಪಳಿಸಲಾಯಿತು.

ಪ್ರತಿಭಟನಾಕಾರರು ಐ.ಟಿ.ಒ.ದಲ್ಲಿ ಕಾರೊಂದನ್ನು ಧ್ವಂಸಗೊಳಿಸಿದರು. ಸಂಘರ್ಷ ತೀವ್ರಗೊಂಡು ಪೊಲೀಸರು ಅಶ್ರುವಾಯು ಸಿಡಿಸಿದರು. ಇಡೀ ರಸ್ತೆ ತುಂಬ ಕಟ್ಟಿಗೆ ಹಾಗೂ ಕಲ್ಲುಗಳು ಬಿದ್ದಿದ್ದವು.

ದಿನ ಕಳೆದಂತೆ ಸಾವಿರಾರು ಅಶಾಂತ ರೈತರು ಕೆಂಪು ಕೋಟೆಯ ಕಡೆ ಕಾಲ್ನಡಿಗೆಯಲ್ಲಿ, ಟ್ರ್ಯಾಕ್ಟರ್ ಮೂಲಕ ಹಾಗೂ ಕೆಲವರು ಕುದುರೆಗಳ ಮೇಲೇರಿ ಬಂದರು. ಕೆಲವರು ಕೆಂಪು ಕೋಟೆಯ ಸಂಕೀರ್ಣಕ್ಕೆ ಟ್ರ್ಯಾಕ್ಟರ್ ನುಗ್ಗಿಸಿದರು.

ಜನರನ್ನು ಕೆಂಪು ಕೋಟೆಯಿಂದ ಚೆದುರಿಸಲು ಲಾಠಿ ಪ್ರಹಾರ ನಡೆಸಬೇಕಾಯಿತು. ಸಾವು - ನೋವಿನ ವರದಿಗಳು ಬಂದಿದಲ್ಲವಾದರೂ, ಆಂಬುಲೆನ್ಸ್‌ಗಳು ಕೆಂಪು ಕೋಟೆಯ ಒಳಗೆ ಹೋದ ದೃಶ್ಯಗಳು ಕಂಡು ಬಂದಿವೆ.

ಶಹದಾರಾದಲ್ಲಿ ಚಿಂತಾಮಣಿ ಚೌಕದಲ್ಲಿ ರೈತರು ಕಾರುಗಳ ಕಿಟಕಿಗಳನ್ನು ಪುಡಿ ಮಾಡಿದ್ದಾರೆ. ಸಿಖ್‌ರ ಸಾಂಪ್ರದಾಯಿಕ ಖಡ್ಗ ಹಿಡಿದಿದ್ದ ಗುಂಪೊಂದು ಅಕ್ಷರಧಾಮ ದೇವಾಲಯದ ಭದ್ರತಾ ಸಿಬ್ಬಂದಿ ಜೊತೆ ಸಂಘರ್ಷ ನಡೆಸಿದ್ದಾರೆ. ನಂಗ್ಲೋಯಿ ಚೌಕ್‌ನಲ್ಲಿ ರೈತರು ಸಿಮೆಂಟ್ ತಡೆಗಳನ್ನು ಧ್ವಂಸಗೊಳಿಸಿದ್ದಾರೆ. ಪೊಲೀಸರು ಅಶ್ರುವಾಯು ಸಿಡಿಸಿ ಅವರನ್ನು ಚೆದುರಿಸಿದರು.

ರೈತರು ದೆಹಲಿಯಲ್ಲಿ ಮಂಗಳವಾರ ನಡೆಸಿದ ಪ್ರತಿಭಟನೆಯನ್ನು ಬೆಂಬಲಿಸಿರುವ ಸಿಪಿಐ (ಎಂ), ಕೇಂದ್ರ ಸರ್ಕಾರ ಟ್ರ್ಯಾಕ್ಟರ್ ರ‍್ಯಾಲಿ ವೇಳೆ ಸರಿಯಾಗಿ ನಡೆಸಿಕೊಂಡಿಲ್ಲ. ಅಶ್ರುವಾಯ ಸಿಡಿಸಿರುವುದು ಹಾಗೂ ಲಾಠಿ ಪ್ರಹಾರ ನಡೆಸಿರುವುದನ್ನು ಒಪ್ಪಲಾಗದು ಎಂದು ಹೇಳಿದೆ.

ಆದರೆ, ರೈತರ ಒಂದು ವರ್ಗ ಕೆಂಪು ಕೋಟೆಗೆ ನುಗ್ಗಿ ವರ್ತಿಸಿರುವ ರೀತಿಯನ್ನು ಖಂಡಿಸಿರುವ ಕೇಂದ್ರ ಪ್ರವಾಸೋದ್ಯಮ ಸಚಿವ ಪ್ರಹ್ಲಾದ್ ಪಟೇಲ್, ದೇಶದ ಪ್ರಜಾಪ್ರಭುತ್ವದ ಸಂಕೇತದ ಮೇಲೆ ದಾಳಿ ನಡೆಸಲಾಗಿದೆ ಎಂದು ಹೇಳಿದ್ದಾರೆ.

### ಸಂಭ್ರಮ ಪುಷ್ಪಗಳಿಂದ ಸ್ವಾಗತ

(1ನೇ ಪುಟದಿಂದ) ಬದಲಾಯಿತು. ಪರೇಡ್ ಮಾರ್ಗ ಬದಲಿಸಬಾರದು, ಕಾನೂನು ಕೈಗೆತ್ತಿಕೊಳ್ಳಬಾರದು ಎಂದು ದೆಹಲಿ ಪೊಲೀಸರು ಮಾಡಿಕೊಂಡ ಮನವಿಯನ್ನು ಲೆಕ್ಕಿಸಲಿಲ್ಲ.

### ಸಂಬಂಧ ಇಲ್ಲ ಎಂದ ಒಕ್ಕೂಟ

(1ನೇ ಪುಟದಿಂದ) ಒಕ್ಕೂಟ ಹೇಳಿದೆ. ಪ್ರತಿಭಟನೆಯ ವೇಳೆ ಹಲವಾರು ಗುಂಪುಗಳು ಪೂರ್ವ ನಿಯೋಜಿತ ಮಾರ್ಗ ದಿಂದ ಬೇರೆಡೆ ತೆರಳಿದ್ದವು. ಈ ವೇಳೆ ತೀವ್ರ ಹಿಂಸಾಚಾರ ಹಾಗೂ ಪೊಲೀಸರ ಜೊತೆ ಸಂಘರ್ಷ ಉಂಟಾಗಿತ್ತು. ಗಣರಾಜ್ಯೋತ್ಸವ ಪರೇಡ್‌ನಲ್ಲಿ ಅಭೂತಪೂರ್ವ ಸಂಖ್ಯೆ ಯಲ್ಲಿ ರೈತರು ಭಾಗಿಯಾಗಿದ್ದಕ್ಕೆ ಧನ್ಯವಾದ ಸಲ್ಲಿಸುತ್ತೇವೆ. ಈ ಸಂದರ್ಭದಲ್ಲಿ ನಡೆದ ಹಿಂಸಾಚಾರಕ್ಕೂ ಸಂಘಟನೆಗೂ ಸಂಬಂಧ ಇಲ್ಲ ಎಂದು ಹೇಳಿಕೆ ಯಲ್ಲಿ ತಿಳಿಸಲಾಗಿದೆ. ನಮ್ಮ ಎಲ್ಲ ಪ್ರಯತ್ನಗಳ ಹೊರತಾಗಿಯೂ ಕೆಲ ಸಂಘಟನೆ ಗಳು ಹಾಗೂ ವ್ಯಕ್ತಿಗಳು ಮಾರ್ಗವನ್ನು ಉಲ್ಲಂಘಿಸಿದರು ಹಾಗೂ ಖಂಡನಾರ್ಹ ಕೃತ್ಯಗಳಲ್ಲಿ ತೊಡಗಿದರು. ಸಮಾಜ ವಿರೋಧಿ ಶಕ್ತಿಗಳು ಶಾಂತಿಯುತ ಹೋರಾಟದಲ್ಲಿ ನುಸುಳಿ ದ್ದಾರೆ. ಅಹಿಂಸೆಯೇ ನಮ್ಮ ಅತಿ ದೊಡ್ಡ ಶಕ್ತಿ ಎಂದು ನಾವು ಹೇಳುತ್ತಲೇ ಬಂದಿದ್ದೇವೆ. ಹಿಂಸಾಚಾರ ನಮ್ಮ ಹೋರಾಟಕ್ಕೆ ಧಕ್ಕೆ ತರುತ್ತದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

### ಟ್ರ್ಯಾಕ್ಟರ್ ಉರುಳಿ ರೈತನ ಸಾವು

(1ನೇ ಪುಟದಿಂದ) ಪೊಲೀಸರು ಹೇಳಿದ್ದಾರೆ. ರೈತರು ಮೃತದೇಹವನ್ನು ತ್ರಿವರ್ಣಧ್ವಜದಿಂದ ಮುಚ್ಚಿದ್ದರು. ಪೊಲೀಸರು ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಒಳಪಡಿಸುವುದಕ್ಕೂ ಅಡ್ಡಿಪಡಿಸಿದರು. ಘಟನೆಯ ವಿವರ ಪಡೆಯಲು ತೆಳಿದ್ದ ಮಾಧ್ಯಮದವರ ವಿರುದ್ಧವೂ ಹರಿಹಾಯ್ದರು. ತಲೆಗೆ ಗುಂಡು ಹಾರಿಸಿದ ಕಾರಣ ಸಾವು ಸಂಭವಿಸಿದೆ ಎಂದು ಕೆಲವರು ಗಾಳಿ ಸುದ್ದಿಯನ್ನು ಹರಡಿದ್ದರು. ಆದರೆ, ಬ್ಯಾರಿಕೇಡ್‌ಗೆ ಟ್ರ್ಯಾಕ್ಟರ್ ಅನ್ನು ವೇಗವಾಗಿ ಬಡಿಸಿದ ನಂತರ ಅದು ಉರುಳಿದ ದೃಶ್ಯಗಳು ಸಿ.ಸಿ.ಟಿ.ವಿ.ಗಳಲ್ಲಿ ಕಂಡು ಬಂದಿವೆ. ಐ.ಟಿ.ಒ. ಬಳಿ ಪ್ರತಿಭಟನಾಕಾರರು ಪೊಲೀಸರು ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದರು. ಟ್ರ್ಯಾಕ್ಟರ್‌ಗಳನ್ನು ಬಸ್‌ಗಳಿಗೆ ಡಿಕ್ಕಿ ಹೊಡೆಸಿದ್ದರು. ಇದೆಲ್ಲದರ ನಡುವೆ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದರು. ಇಡೀ ಪ್ರದೇಶ ಅರಾಜಕವಾಗಿ ಪರಿಣಮಿಸಿತ್ತು.

# ಜಿಲ್ಲಾ ಪ್ರಗತಿ ವರದಿ ಮಂಡಿಸಿದ ಸಚಿವ ಭೈರತಿ

**(1ನೇ ಪುಟದಿಂದ)** ಸ್ಮಾರ್ಟ್ ಸಿಟಿ ಯೋಜನೆಯಡಿ ಕೈಗೊಳ್ಳುತ್ತಿರುವ ಕಾಮಗಾರಿಗಳು ಹಾಗೂ ಮಹಾನಗರ ಪಾಲಿಕೆಯ ಕಾಮಗಾರಿಗಳ ಕುರಿತು ಸುದೀರ್ಘ ವಿವರ ನೀಡಿದರು.

ಸಾವಿರ ಸಂಖ್ಯೆಯಲ್ಲಿದ್ದ ಕೊರೊನಾ ಪ್ರಕರಣಗಳು ಈಗ ಎರಡಂಕಿಗೆ ಬಂದಿವೆ. ಪ್ರಧಾನ ಮಂತ್ರಿ ಹಾಗೂ ಮುಖ್ಯಮಂತ್ರಿ ನೇತೃತ್ವದಲ್ಲಿ ಸಂಜೀವಿನಿಯಂತೆ ಬಂದಿರುವ ಲಸಿಕೆ ನಮ್ಮಲ್ಲಿ ಮತ್ತಷ್ಟು ಹುಮ್ಮಸ್ಸು ತುಂಬಿದೆ. ಈ ಲಸಿಕೆ ಅಭಿಯಾನ ಜಿಲ್ಲಾದ್ಯಂತ ಯಶಸ್ವಿಯಾಗಿ ನಡೆಯುತ್ತಿದೆ ಎಂದವರು ಹೇಳಿದರು.

ನಗರದಲ್ಲಿ ಪ್ರತಿನಿತ್ಯ ಉತ್ಪತ್ತಿಯಾಗುವ 170 ಟನ್ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಲು, ಸ್ವಚ್ಛ ಭಾರತ ಮಿಷನ್ ಯೋಜನೆಯಡಿ 25.78 ಕೋಟಿ ರೂ. ವೆಚ್ಚದ ಯೋಜನಾ ವರದಿಗೆ ಸರ್ಕಾರ ಅನುಮೋದನೆ ನೀಡಿದೆ. ಯೋಜನೆ ಅನುಷ್ಠಾನದ ನಂತರ ರೈತರಿಗೆ ಭೂ ಫಲವತ್ತತೆ ಉತ್ತಮಗೊಳಿಸಲು ವಾರ್ಷಿಕ 6000 ಟನ್ ಸಿಟಿ ಕಾಂಪೋಸ್ಟ್ ತಯಾರಿಸಲಾಗುವುದು ಎಂದು ಸಚಿವರು ಹೇಳಿದರು.

ದೇಶ 1950ರ ಜನವರಿ 26 ರಂದು ಸಂವಿಧಾನವನ್ನು ಅಂಗೀಕರಿಸಿ, ಸಾರ್ವಭೌಮ ರಾಷ್ಟ್ರವಾಗಿ ಹೊರಹೊಮ್ಮಿದೆ.

ಸಂವಿಧಾನದ ಕರಡು ರಚನಾ ಸಮಿತಿಯಲ್ಲಿ ಡಾ॥ಅಂಬೇಡ್ಕರ್ ಅವರ ಪಾತ್ರ ಮಹತ್ತರವಾಗಿತ್ತು. ತಮ್ಮ ಪಾತ್ರವನ್ನು ಸಂಪೂರ್ಣವಾಗಿ ನಿರ್ವಹಿಸುವಲ್ಲಿ ಅಂಬೇಡ್ಕರ್ ಅವರಿಗೆ ಹಲವಾರು ದೇಶಗಳ ಸಂವಿಧಾನಗಳನ್ನು ಆಳವಾಗಿ ಅಧ್ಯಯನ ಮಾಡಿದ ಅನುಭವ ನೆರವಾಯಿತು. ಅವರ ಸೇವೆಗೆ ದೊರೆತ ಮನ್ನಣೆಗೆ 'ಸಂವಿಧಾನದ ಪಿತಾಮಹ' ಎಂದು ನಾವು ಸ್ಮರಿಸುವಂತಾಗಿದೆ ಎಂದವರು ಹೇಳಿದರು.

ಪಥಸಂಚಲನ : ಡಿಎಆರ್ ಪೊಲೀಸ್ ತಂಡ, ನಾಗರಿಕ ಪೊಲೀಸ್ ತಂಡ, ಗೃಹ ರಕ್ಷಕದಳ, ಅರಣ್ಯ ಇಲಾಖೆ, ಅಬಕಾರಿ ಪೊಲೀಸ್ ತಂಡ, ಅಗ್ನಿಶಾಮಕ ದಳಗಳು ಪೊಲೀಸ್ ವಾದ್ಯವೃಂದದ ಹಿಮ್ಮೇಳದಲ್ಲಿ ಪಥಸಂಚಲನ ನಡೆಸಿದವು.

**ಅಧಿಕಾರಿಗಳಿಗೆ ಗೌರವ** : ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ ನಿಯಂತ್ರಣ ಕಾಯ್ದೆಯನ್ನು ನಗರದಲ್ಲಿ ಶೇ. 90 ರಷ್ಟು ಅನುಷ್ಠಾನಗೊಳಿಸಿರುವ ಪ್ರಯುಕ್ತ 'ತಂಬಾಕು ಮುಕ್ತ ದಾವಣಗೆರೆ ನಗರ' ವನ್ನಾಗಿ ಘೋಷಿಸಿದ್ದು, ಇದಕ್ಕೆ ಶ್ರಮಿಸಿದ ಅಧಿಕಾರಿಗಳಿಗೆ ಗೌರವ ಸ್ಮರಣಿಕೆಯನ್ನು ನೀಡಿ ಸನ್ಮಾನಿಸಲಾಯಿತು.

ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಅಧ್ಯಕ್ಷ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಕೋಶದ ಉಪಾಧ್ಯಕ್ಷರಾದ ಪ್ರಭಾರ ಪೊಲೀಸ್ ವರಿಷ್ಠಾಧಿಕಾರಿ ಎಂ.ರಾಜೀವ್, ಜಿಲ್ಲಾ ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ಪದ್ಮಾ ಬಸವಂತಪ್ಪ, ಅಪರ ಜಿಲ್ಲಾಧಿಕಾರಿ ಪೂಜಾರ ವೀರಮಲ್ಲಪ್ಪ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ನಾಗರಾಜ್, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ ಮತ್ತಿತರರಿಗೆ ಗೌರವ ಸ್ಮರಣಿಕೆ ನೀಡಲಾಯಿತು.

**ಸನ್ಮಾನ** : ಕೋವಿಡ್ ಹಿನ್ನೆಲೆಯಲ್ಲಿ ಸೇವೆ ಸಲ್ಲಿಸಿದ ಸಿ.ಜಿ. ಆಸ್ಪತ್ರೆ ವೈದ್ಯ ಡಾ. ಮುನಾವರ್ ಹುಸೇನ್, ಹೊನ್ನಾಳಿ ಸರ್ಕಾರಿ ಆಸ್ಪತ್ರೆ ವೈದ್ಯಾಧಿಕಾರಿ ಡಾ. ಚಂದ್ರಪ್ಪ, ಚನ್ನಗಿರಿ ಸರ್ಕಾರಿ ಆಸ್ಪತ್ರೆ ವೈದ್ಯಾಧಿಕಾರಿ ಡಾ. ಆರ್.ಎಮ್.ಗಿರಿ, ಬಾಪೂಜಿ ಮಕ್ಕಳ ಆಸ್ಪತ್ರೆ ನಿರ್ದೇಶಕ ಡಾ. ಬಿ.ಎಂ. ಹರ್ಷ, ಸ್ಪಂದನ ಯೂರಾಲಜಿ ಸೆಂಟರ್‌ನ ವೈದ್ಯಕೀಯ ನಿರ್ದೇಶಕ ಡಾ.ನವೀನ್ ಹಾಗೂ ಎನ್.ಸಿ.ಸಿ.ಯ ಶ್ರೀಷ್ಮ ಹೆಗಡೆ, ಮಹಮ್ಮದ್ ಮುಸವೀರ್ ಪಾಷಾ, ಇಂಫನಾ, ಬಿ.ಜಿ. ಅನುಶ್ರೀ ಇವರನ್ನು ಗೌರವಿಸಿ, ಸನ್ಮಾನಿಸಲಾಯಿತು.

ಶಾಸಕ ಎಸ್.ಎ ರವೀಂದ್ರನಾಥ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು, ಸಂಸದ ಜಿ.ಎಂ.ಸಿದ್ದೇಶ್ವರ, ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಕೆ.ವಿ. ಶಾಂತಕುಮಾರಿ, ಪಾಲಿಕೆ ಮೇಯರ್ ಬಿ.ಜಿ. ಅಜಯಕುಮಾರ್, ದೂಡಾ ಅಧ್ಯಕ್ಷ ಶಿವಕುಮಾರ್, ಪ್ರಭಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ರಾಜೀವ್, ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ನಜ್ಮಾ, ದೂಡಾ ಆಯುಕ್ತ ಬಿ.ಟಿ. ಕುಮಾರಸ್ವಾಮಿ, ತಹಶೀಲ್ದಾರ್ ಗಿರೀಶ್ ಮತ್ತಿತರರು ಉಪಸ್ಥಿತರಿದ್ದರು.

### ರಾಮ ಮಂದಿರ ಸ್ತಬ್ಧ ಚಿತ್ರ

**(1ನೇ ಪುಟದಿಂದ)** ರಾಮ ಮಂದಿರವನ್ನು ಬಿಂಬಿಸುವ ಸ್ತಬ್ಧ ಚಿತ್ರ ಎಲ್ಲರ ಗಮನ ಸೆಳೆಯಿತು. ದೀಪೋತ್ಸವ ಸೇರಿದಂತೆ ರಾಮಾಯಣ ಕಾಲದ ಹಲವು ಕಥೆಗಳನ್ನು ಸ್ತಬ್ಧಚಿತ್ರದ ಮೂಲಕ ಬಿಂಬಿಸಲಾಗಿತ್ತು. ಸ್ತಬ್ಧಚಿತ್ರದ ಮುಂಭಾಗದಲ್ಲಿ ಮಹರ್ಷಿ ವಾಲ್ಮೀಕಿ ಮಹಾಕಾವ್ಯ ರಚಿಸುವ ದೃಶ್ಯವಿತ್ತು. ಹಿನ್ನೆಲೆಯಲ್ಲಿ ಭವ್ಯ ರಾಮ ಮಂದಿರದ ಮಾದರಿ ಇತ್ತು.

ಅಯೋಧ್ಯೆ ನಮ್ಮ ಪವಿತ್ರಸ್ಥಳ ಹಾಗೂ ರಾಮ ದೇವರು ನಮ್ಮ ನಂಬಿಕೆ ಭಾವನಾತ್ಮಕ ವಿಷಯ. ಈ ಸ್ತಬ್ಧ ಚಿತ್ರ ದೇವಾಲಯ ನಗರದ ಪುರಾತನ ಪರಂಪರೆಯನ್ನು ಬಿಂಬಿಸುತ್ತದೆ, ಇದನ್ನು ಬಹುಕಾಲದಿಂದ ದೇಶಾದ್ಯಂತ ಜನರು ಗೌರವಿಸುತ್ತಾ ಬಂದಿದ್ದಾರೆ ಎಂದು ಸ್ತಬ್ಧಚಿತ್ರವನ್ನು ಪರೇಡ್‌ಗೆ ಕಳಿಸಿದ ಉತ್ತರ ಪ್ರದೇಶದ ಅಧಿಕಾರಿಗಳು ಹೇಳಿದ್ದಾರೆ.

### ಹಾರಿದ ರಫೇಲ್

**(1ನೇ ಪುಟದಿಂದ)** ಹಾರಾಟದಲ್ಲಿ ರಫೇಲ್ ಮುಂಚೂಣಿಯಲ್ಲಿತ್ತು. ನಂತರದಲ್ಲಿ ಬ್ರಹ್ಮಾಸ್ತ್ರ ಸ್ವರೂಪದಲ್ಲಿ ರಫೇಲ್ ವಿಮಾನಗಳು ಅತ್ಯಂತ ಕೆಳ ಹಂತದಲ್ಲಿ ಹಾರಾಟ ನಡೆಸಿದವು. ನಂತರ 90 ಡಿಗ್ರಿ ಮೇಲ್ಮುಖವಾಗಿ ಚಲಿಸಿ, ಉನ್ನತ ಹಂತದಲ್ಲಿ ಹಾರಾಟ ನಡೆಸಿದವು.

ಗಣರಾಜ್ಯೋತ್ಸವ ಸಂದರ್ಭದಲ್ಲಿ ವಾಯುಪಡೆಯ 38 ಹಾಗೂ ಸೈನ್ಯದ ನಾಲ್ಕು ವಿಮಾನಗಳು ಹಾರಾಟ ನಡೆಸಿದವು.


**ಸೈಟ್‌ಗಳು ಮತ್ತು ಕಮರ್ಷಿಯಲ್ ಸೈಟ್‌ಗಳು ಮಾರಾಟಕ್ಕಿವೆ**
ಆಶೀರ್ವಾದ ಬಡಾವಣೆ (ಶಿವ ಪಾರ್ವತಿ ಪಕ್ಕ) 30x40 ಪಶ್ಚಿಮ, ನಿಜಲಿಂಗಪ್ಪ ಬಡಾವಣೆ 30x40, 30x50 ಉತ್ತರ, 40x60 ದಕ್ಷಿಣ, ಶಾಮನೂರು ಮುಖ್ಯ ರಸ್ತೆ 30x50 (ಕಮರ್ಷಿಯಲ್ ಸೈಟ್), ಜೆ.ಹೆಚ್ ಪಟೇಲ್ ಬಡಾವಣೆ 47x105 ಉತ್ತರ
ಮನೆ ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ:
95911 60520 -ಸುರೇಶ್
99457 02495- ಐಗೂರು ವಿಜಯ್ ಕುಮಾರ್

**ಸೈಟ್‌ಗಳು ಮಾರಾಟಕ್ಕಿವೆ**
ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ, ಪುಷ್ಪ ಮಹಾಲಿಂಗಪ್ಪ ಸ್ಕೂಲ್ ಹತ್ತಿರ 30x50 North, 40x60 North, 30x38 East, 60x38 East, 30x38, 30x38 East, ಅಕ್ಕ-ಪಕ್ಕ
ಐನಳ್ಳಿ ಚನ್ನಬಸಪ್ಪ, ಏಜೆಂಟ್
93410 14130, 99166 12110

**ನಿಮ್ಮ ಗಮನಕ್ಕೆ**
ನಿಮ್ಮ ದೇಹದ ತೂಕ ಕಡಿಮೆ/ ಹೆಚ್ಚಿಸಿಕೊಳ್ಳಿ
(ಉಚಿತ ತಪಾಸಣೆ ಇರುತ್ತದೆ)
ಇಂದೇ ಕರೆ ಮಾಡಿ
90970 70333

**ಹಾಲಿನ ಡೈರಿ ಫಾರಂ ಬಾಡಿಗೆಗೆ ಸಿಗುತ್ತದೆ**
ಹೊಸ ಬಿಸಲೇರಿ ರಸ್ತೆಯಲ್ಲಿ ಹಾಲಿನ ಡೈರಿ ಫಾರಂ ಬಾಡಿಗೆಗೆ ಸಿಗುತ್ತದೆ. ಸಂಪರ್ಕಿಸಿ :
ಮೊ.94489 66128

**ಸೈಟ್‌ಗಳು ಮಾರಾಟಕ್ಕಿವೆ**
ಬಾಟಲಿ ಬಿಲ್ಡಿಂಗ್ ಹಿಂಭಾಗ 30x50 ಉತ್ತರ, ಬನಶಂಕರಿ ಬಡಾವಣೆಯಲ್ಲಿ 50x50 ಕಾರ್ನರ್ ಉತ್ತರ ಪೂರ್ವ, ವಾಜಪೇಯಿ ಲೇಔಟ್‌ನಲ್ಲಿ 30x40 ಪಶ್ಚಿಮ
ಶಾಮನೂರು ಧನ್ಯಕುಮಾರ್
97415 62589
ಸ್ವಾಮಿ, ಏಜೆಂಟ್, ವಿದ್ಯಾನಗರ
97421 44715

**ಮನೆ, ಸೈಟು ಖರೀದಿಗೆ ಬೇಕಿದೆ**
ಕಿರಣ್ ಬೂಸ್ನೂರ್ (ಏಜೆಂಟ್)
ಆಫೀಸ್ : ಲ್ಯಾಂಡ್ ಲಿಂಕ್ಸ್, ರಿಯಲ್ ಎಸ್ಟೇಟ್ ಏಜೆನ್ಸಿ ನಯನಾ'ಸ್ ಕಾಂಪ್ಲೆಕ್ಸ್, ಬಿಐಇಟಿ ಕಾಲೇಜ್ ರೋಡ್, ಬಾಪೂಜಿ ಬ್ಯಾಂಕ್ ಹೇಮಾವತಿ ಹಾಸ್ಟೆಲ್ ಹತ್ತಿರ.
97315-63409, 98440-63409
(ರಿಯಲ್ ಎಸ್ಟೇಟ್ ಏಜೆಂಟರಿಗೂ ಅವಕಾಶವಿದೆ)

**ಮಳಿಗೆ ಬಾಡಿಗೆಗಿದೆ**
ತ್ರಿಶೂಲ್ ಟಾಕೀಸ್ ರಸ್ತೆಯಲ್ಲಿ ಶ್ರೀ ಆದರ್ಶ ಶಾಮಿಯಾನ ಅಂಗಡಿ ಎದುರಿಗೆ ಇರುವ ಮಳಿಗೆ ಖಾಲಿ ಇದ್ದು, ಬಾಡಿಗೆಗೆ ದೊರೆಯುತ್ತದೆ.
ಸಂಪರ್ಕಿಸಿ :
99451 99770

**ಮಳಿಗೆಗಳು ಬಾಡಿಗೆಗೆ ಇದೆ**
ವಿನೋಬ ನಗರ 2ನೇ ಮುಖ್ಯರಸ್ತೆ, 1ನೇ 'A' ಕ್ರಾಸ್‌ನಲ್ಲಿರುವ ಮೊದನೇ ಮಹಡಿಯಲ್ಲಿ ಇರುವ ಮಳಿಗೆಗಳು ಆಫೀಸ್‌ಗಳಿಗಾಗಿ ಮಾಗನೂರು ಬಸಪ್ಪ ಶಾಲೆ ಪಕ್ಕದಲ್ಲಿ ಬಾಡಿಗೆಗೆ ಇವೆ. ಸಂಪರ್ಕಿಸಿ :
99451 99770

**ಮನೆ ಮಾರಾಟಕ್ಕಿದೆ**
ಕುವೆಂಪು ಬಡಾವಣೆಯಲ್ಲಿ 40x60 North 3 ಬೆಡ್‌ರೂಂನ ಇಂಡಿಪೆಂಡೆಂಟ್ ಹೌಸ್ ಮಾರಾಟಕ್ಕಿದೆ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110
93410 14130

**WANTED**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅಭ್ಯರ್ಥಿಗಳು ಬೇಕಾಗಿದ್ದಾರೆ.
1) ಸೇಲ್ಸ್ 2) ಕ್ಯಾಶಿಯರ್ 3) ಕಂಪ್ಯೂಟರ್ ಆಪರೇಟರ್
ಸಂಪರ್ಕಿಸಿ:
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ-1

**WANTED**
Office Boy - 5
Contact With Bio Data
KANTI HANDLOOM
Kaipet, Davangere.
94487 54226

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಲೇಔಟ್‌ನಲ್ಲಿ 30x50 ಪೂರ್ವ ಅಕ್ಕ-ಪಕ್ಕ 30x48 ಪೂರ್ವ, ವಿನಾಯಕ ಬಡಾವಣೆಯಲ್ಲಿ 30x40 ಪಶ್ಚಿಮ ದಕ್ಷಿಣ ಕಾರ್ನರ್
ಸ್ವಾಮಿ, ಏಜೆಂಟ್, ವಿದ್ಯಾನಗರ
97421 44715

**ಮನೆ ಬಾಡಿಗೆಗೆ/ಲೀಜಿಗೆ ಇದೆ**
ದಾವಣಗೆರೆ ಕುಂದವಾಡ ಸಮೀಪದ ಕೆ.ಹೆಚ್.ಬಿ. ಕಾಲೋನಿ (ತುಂಗಭದ್ರ ಬಡಾವಣೆ) 1ನೇ ಹಂತ ನ್ಯಾಯಾಧೀಶರ ಕ್ವಾರ್ಟ್ರಸ್ ಎದುರು, ಮನೆ ನಂ. 85, 3 ಬೆಡ್‌ರೂಂ ಅಟ್ಯಾಚ್ಡ್ ಬಾತ್ ರೂಂ ಇರುವ ಮನೆ ಬಾಡಿಗೆಗೆ / ಲೀಜಿಗೆ ಇದೆ.
94483 32328, 63604 64879

**ಮನೆಗಳು ಬಾಡಿಗೆಗೆ ಇರುತ್ತವೆ**
ದಾವಣಗೆರೆ ಎಂಸಿಸಿ ಬಿ ಬ್ಲಾಕ್‌ನ ಕುವೆಂಪು ನಗರದಲ್ಲಿರುವ ಮನೆಗಳು (Apartment, Ist Floor & IInd Floorನಲ್ಲಿ) ಪೂರ್ವ ಮತ್ತು ಉತ್ತರ ದಿಕ್ಕುಗಳಿಗಿರುವ, ನೀರಿನ ಸೌಲಭ್ಯ ಹಾಗೂ ವಾಹನ ನಿಲುಗಡೆಗೆ ವ್ಯವಸ್ಥೆ ಇರುವ ಮನೆಗಳು ಬಾಡಿಗೆಗೆ ಇರುತ್ತವೆ.
90666 37770

**ಮನೆ ಲೀಸ್ ಅಥವಾ ಬಾಡಿಗೆಗೆ ಇದೆ**
#91/85/263, ಡಿಸಿಎಂ ಟೌನ್‌ಷಿಪ್ 6ನೇ ಮೇನ್, 4ನೇ ಕ್ರಾಸ್ ನಲ್ಲಿ ಸಿಂಗಲ್ ಬೆಡ್ ರೂಂ ಮನೆ ಲೀಸ್ ಗೆ / ಬಾಡಿಗೆಗೆ ಇದೆ. ವಿಚಾರಿಸಿ:
ಫೋ. : 97401 11769

**ಟೈರ್ ಶೋ ರೂಮ್‌ನಲ್ಲಿ**
wheel Alignment ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಮಾತ್ರ
ಸಂಬಳ : 13,000/-
95381 87385,
08192-261003
99161 43003

**ನೇರ ಪರೀಕ್ಷೆಗಳು**
DIRECT EXAMS
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ ಸಂಬಳ 6000 ರಿಂದ 7000 ಊಟ, ರೂಂ, ಉಚಿತ. ನೆಲ, ಬಾತ್‌ರೂಂ ಕ್ಲೀನಿಂಗ್ ಕೆಲಸ ಸಂಪರ್ಕಿಸಿ:
97400 98047, 97400 98064

**ಮಳಿಗೆ ಲೀಜ್/ಬಾಡಿಗೆಗೆ**
15x30 N.R. Road,
Hasabavi Circle
89041 29928

**ತಕ್ಷಣ ಬೇಕಾಗಿದ್ದಾರೆ**
ಮಹಿಳೆಯರು, ಪುರುಷರು ಹಾಗೂ ವಿಧವೆ, ವಿಚ್ಛೇದಿತೆಯರು ತಕ್ಷಣ ಹೋಂ ನರ್ಸಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಊಟ, ವಸತಿ ಯೊಂದಿಗೆ 10,000 ದಿಂದ 15,000 ದವರೆಗೂ ಸಂಬಳ ನೀಡಲಾಗುತ್ತದೆ.
63647 94445, 72593 06665
90353 24777

**ಬೇಕಾಗಿದ್ದಾರೆ**
ಕಾರ್ ಡ್ರೈವರ್. ವೇತನ 9000 ದಿಂದ 10,000/- ಮತ್ತು ವಾಟರ್ ಪ್ಯೂರಿಫೈರ್ ಸರ್ವಿಸ್ ಸೆಂಟರ್‌ನಲ್ಲಿ ಹೆಲ್ಪರ್ ಬೇಕಾಗಿದ್ದಾರೆ. ವೇತನ 9000/-
99642 22603,
78992 96668

**ಬೇಕಾಗಿದ್ದಾರೆ**
PUC, Degree ವರೆಗೆ ಮಹಿಳೆಯರು, ಪುರುಷರು ಬೇಕಾಗಿದ್ದಾರೆ. 100% Job
ಉದ್ಯೋಗ ಮಾಹಿತಿ ಕೇಂದ್ರ,
98452 79197
88614 38237

**ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ**
ದಾವಣಗೆರೆ ರಾಂ & ಕೋ ಸರ್ಕಲ್, 5ನೇ ಮುಖ್ಯ ರಸ್ತೆಯಲ್ಲಿ 22x15 ಅಳತೆ, ಗ್ರೌಂಡ್ ಫ್ಲೋರ್, ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ.
95353 54747

**ಸೇಲ್ಸ್‌ಮ್ಯಾನ್ ಬೇಕಾಗಿದ್ದಾರೆ**
2-3 ವರ್ಷ ಅನುಭವವುಳ್ಳ ಸೇಲ್ಸ್‌ಮ್ಯಾನ್ ಬೇಕಾಗಿದ್ದಾರೆ. ಆಸಕ್ತರು ವಿಚಾರಿಸಿ
(ಸಂಪರ್ಕಿಸುವ ಸಮಯ ಬೆಳಿಗ್ಗೆ 10ರಿಂದ ಸಂಜೆ 5 ರವರೆಗೆ)
99865 38099

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**ಭೂಮಿಕ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
H.O : Vidya Nagara, 1st Bus Stop, Davanagere
B.O: BIET College Road, Near Hemavati Hostel
77603 16576, 90080 55813

**2BHK ಮನೆ ಬಾಡಿಗೆಗೆ ಇದೆ**
ದಾವಣಗೆರೆ ಶಿವಕುಮಾರಸ್ವಾಮಿ, 2ನೇ ಸ್ಟೇಜ್, KEB ಪವರ್ ಸ್ಟೇಷನ್ ಹತ್ತಿರ 2 ಬೆಡ್‌ರೂಂ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿರಿ
98455 18314
98454 74978

**ಮನೆ ಬಾಡಿಗೆಗೆ ಇದೆ**
ಟಿ.ವಿ. ಸ್ಟೇಷನ್‌ಗೆ, ಸರ್.ಎಂ.ವಿ. ಕಾಲೇಜ್, ಶಶಿ ಸೋಪ್ ಫ್ಯಾಕ್ಟರಿಗೆ, ಹೈಟೆಕ್ ಆಸ್ಪತ್ರೆಗೆ ತುಂಬಾ ಹತ್ತಿರವಿರುವ ವಿಶಾಲವಾದ ಹಾಲ್, 2 ಬೆಡ್‌ರೂಂ, 2 ಬಾತ್‌ರೂಂ, ಸೋಲಾರ್, ಕಾರ್ ಪಾರ್ಕಿಂಗ್, ಸದಾ ನೀರಿನ ವ್ಯವಸ್ಥೆ, ವಾಸ್ತು ಪ್ರಕಾರವಿರುವ ಮನೆ ಕ್ಲೀನ್ ಆಗಿ ಮನೆ ಇಟ್ಟುಕೊಳ್ಳುವವರಿಗೆ, ಹಿಂದೂ ಜನಕ್ಕೆ, ಆರೋಗ್ಯವಂತರಿಗೆ ಮಾತ್ರ ವಿಚಾರಿಸಿ.
99865 38099, 99806 11110

**UPS BATTERY & RO PURIFIERS**
Sales & Service
PEACE ENTERPRISES
83100 42490, 99013 18277
98801 56667

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 19 ಗುಂಟೆ ಜಮೀನು ಸಾಯಿಬಾಬಾ ಮಂದಿರದ ಎದುರು ಶಾಮನೂರು-ದೇವರ ಬೆಳಕೆರೆ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
95352 69849
87220 14318

**ಸ್ವಯಂ ಪ್ರೇರಣ ವೈಜ್ಞಾನಿಕ-ವಾಸ್ತು**
'ನಿಮ್ಮ ಪ್ರಗತಿಪರ ಜೀವನಕ್ಕಾಗಿ ನಮ್ಮ ಪ್ರಯತ್ನ' ಅಸ್ಟ್ರೋ -ವಾಸ್ತು ಪರಿಹಾರ : ನಿಮ್ಮ ಎಲ್ಲಾ ತರಹದ ಸಮಸ್ಯೆಗಳಿಗೆ ಆರೋಗ್ಯ, ಹಣಕಾಸು, ಶಿಕ್ಷಣ, ಸಂಬಂಧ, ನೌಕರಿ, ಉದ್ಯೋಗ, ವಿವಾಹ, ಕೋರ್ಟ್ ವ್ಯಾಜ್ಯಗಳು ಮುಂತಾದವು.
8618035192, 8762089930

**FREE M1 & M2 CLASSES DIPLOMA**
PH:8217624367
or 8971279127

**DIPLOMA & BE TUITIONS**
For All Branches
ಸಮೃದ್ಧಿ ಕೋಚಿಂಗ್ ಅಕಾಡೆಮಿ
81472 62361

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ ಮತ್ತು ಸೂಪರ್‌ವೈಜರ್ ಬೇಕಾಗಿದ್ದಾರೆ. ESI-PF ಜೊತೆ ಆಕರ್ಷಕ ಸಂಬಳ ಇರುತ್ತದೆ. ತಕ್ಷಣ ಸಂಪರ್ಕಿಸಿ.
ಫೋ. : 94358 83109
98448 18900

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**JOBS**
MCS ACADEMY
Training & Placement Cell
98444 92888

**ALPHABET COACHING**
B.E / DIPLOMA CLASSES
Free M1 & M2 Classes for Diploma Students
Photoshop CS6/Tally
8217624367, 8971279127

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಸೈಟ್ ಬೇಕಾಗಿದೆ**
ಯರಗುಂಟೆ/ಕರೂರು ಹತ್ತಿರ 3ರಿಂದ 3.5 ಲಕ್ಷಕ್ಕೆ ರೆವಿನ್ಯೂ ಸೈಟು ಬೇಕಾಗಿದೆ.
90362 81419

**Vijay Para Medical College**
Golden Public School Near, DCM Town ship Davanagere.
DMLT- (Lab Technician)
DHT- Health Inspector
DMIT - X-ray Technician
DOT- Operation Theatre
Contact: 77601 55550

**ಗ್ಲೋಬಲ್ ಹೆಲ್ಫ್‌ಲೈನ್ ನಿರುದ್ಯೋಗ ನಿವಾರಣಾ ಸಂಘ (ರಿ.)**
ಯುವಕ/ಯುವತಿಯರೇ, ಕೆಲಸವಿಲ್ಲ ಎಂದು ಕೊರಗಬೇಡಿ... ನಿಮ್ಮ ವಿದ್ಯಾರ್ಹತೆಗೆ ತಕ್ಕ ಕೆಲಸಗಳನ್ನು ನಮ್ಮ ಸಂಘದ ವತಿಯಿಂದ ಕೊಡಿಸುತ್ತೇವೆ.
ಉದ್ಯೋಗ ಮಾಹಿತಿ ಕೇಂದ್ರ
81470 12999, 89512 72999

# ದೆಹಲಿ ಪರೇಡ್ : ಜಗಳೂರು ರೈತರ ಬೆಂಬಲ



ಜಗಳೂರು, ಜ.26- ದೆಹಲಿಯಲ್ಲಿ ನಡೆಯುತ್ತಿರುವ ಟ್ರ್ಯಾಕ್ಟರ್ ಪರೇಡ್‌ಗೆ ಬೆಂಬಲಿಸಿ ಕರ್ನಾಟಕ ರಾಜ್ಯರೈತ ಸಂಘ ಮತ್ತು ಹಸಿರುಸೇನೆ ಹಾಗೂ ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಟ್ಟಣದ ಪ್ರವಾಸಿ ಮಂದಿರದಿಂದ ಹೊರಟ ಬೈಕ್, ಟ್ರ್ಯಾಕ್ಟರ್ ಹಾಗೂ ಕಾಲ್ನಡಿಗೆ ಜಾಥಾ ಪ್ರಮುಖ ಬೀದಿಗಳ ಮೂಲಕ ಮಹಾತ್ಮ ಗಾಂಧಿ ವೃತ್ತ, ಅಂಬೇಡ್ಕರ್ ವೃತ್ತದ ಮೂಲಕ ತಾಲ್ಲೂಕು ಕಛೇರಿಗೆ ತೆರಳಿ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಚಿರಂಜೀವಿ ಸಿ.ಎಂ ಹೊಳೆ ಮಾತನಾಡಿ, ಕೇಂದ್ರ ಮತ್ತು ರಾಜ್ಯ ಸರ್ಕಾರ ಜಾರಿಗೆ ತಂದಿರುವ ಮೂರು ಸುಗ್ರೀವಾಜ್ಞೆಗಳನ್ನು ರದ್ದುಪಡಿಸಬೇಕು. ರೈತರು ಬೆಳೆದ ಬೆಳೆಗೆ ಬೆಂಬಲ ಬೆಲೆ ಜಾರಿಗೊಳಿಸಬೇಕು, ಘೋಷಿತ ಬೆಲೆಗಿಂತ ಕಡಿಮೆ ಬೆಲೆಗೆ ಧಾನ್ಯ ಖರೀದಿಸುವವರ ಪರವಾನಿಗೆ ರದ್ದುಪಡಿಸಿ ಅಂತಹವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು, ಖಾಸಗೀಕರಣ ಪ್ರಕ್ರಿಯೆ ಕೈಬಿಡಬೇಕು ಎಂದು ಒತ್ತಾಯಿಸಿದರು.

ದೇಶದ ಬೆನ್ನೆಲುಬು ಎಂದು ಹೇಳುವ ಸರ್ಕಾರ ದೇಶದಲ್ಲಿ 58 ದಿನಗಳ ಕಾಲ ಕೊರೆಯುವ ಚಳಿಯಲ್ಲಿ ನ್ಯಾಯಯುತ ಬೇಡಿಕೆಗೆ ಹೋರಾಟ ನಿರತರಾಗಿ 70 ಕ್ಕೂ ಅಧಿಕ ರೈತರು ಪ್ರಾಣ ಕಳೆದುಕೊಂಡರೂ ಕೇಂದ್ರ ಸರ್ಕಾರ ಸ್ಪಂದಿಸಿಲ್ಲ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ಎಐಟಿಯುಸಿ ತಾಲ್ಲೂಕು ಕಾರ್ಯದರ್ಶಿ ಮಹಮ್ಮದ್ ಬಾಷಾ, ಭಿಮ್ ಆರ್ಮಿ ಸಂಘಟನೆ ತಾಲ್ಲೂಕು ಅಧ್ಯಕ್ಷ ಹನುಮಂತಪ್ಪ, ಡಿಎಸ್ ಎಸ್ ತಾಲ್ಲೂಕು ಅಧ್ಯಕ್ಷ ಸತೀಶ್ ಮಲೆಮಾಚಿಕೆರೆ, ಪ್ರಗತಿಪರ ಒಕ್ಕೂಟದ ಧನ್ಯಕುಮಾರ್, ಎಂ.ರಾಜಪ್ಪ, ಮಾದಿಹಳ್ಳಿ ಮಂಜುನಾಥ್, ವೀರಣ್ಣ, ತಿಪ್ಪೇಸ್ವಾಮಿ, ಸ್ವಾಮಿ, ರೈತ ಸಂಘಟನೆಯ ಪದಾಧಿಕಾರಿಗಳಾದ ಲೊಕೇಶ್, ಸತೀಶ್, ಶರಣಪ್ಪ, ರಾಜು, ಪ್ರಹ್ಲಾದಪ್ಪ, ನಾಗರಾಜ್, ಸುಧಾ, ಮಂಜಮ್ಮ ಅನಿತಾ, ದಂಡ್ಯಮ್ಮ, ರಂಗಪ್ಪ ಸೇರಿದಂತೆ ಇತರರು ಭಾಗವಹಿಸಿದ್ದರು.

# ಕಾನೂನನ್ನು ಸ್ವಾರ್ಥಕ್ಕಾಗಿ ಬಳಸಿಕೊಳ್ಳಬಾರದು



## ಹರಪನಹಳ್ಳಿಯ ನ್ಯಾ|| ಉಂಡಿ ಮಂಜುಳಾ ಶಿವಪ್ಪ

ಹರಪನಹಳ್ಳಿ, ಜ.26- ಸಾರ್ವಜನಿಕರು ಮಾಡುವ ಕೆಲವು ತಪ್ಪುಗಳನ್ನು ಆತ್ಮಾವಲೋಕನ ಮಾಡಿಕೊಂಡು ದೇಶದ ಪ್ರಗತಿಯತ್ತ ಸಾಗಬೇಕಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶೆ ಉಂಡಿ ಮಂಜುಳಾ ಶಿವಪ್ಪ ಹೇಳಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ 72 ನೇ ಗಣರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಸಂವಿಧಾನ ರಚನೆಯಾಗಿ ಇಂದಿಗೆ 72 ವರ್ಷ ಗತಿಸಿದ್ದು, ಭಾರತದಲ್ಲಿ ಬೃಹತ್ತಾದ ಸಂವಿಧಾನವನ್ನು ಪಡೆದುಕೊಂಡ ನಾವುಗಳು ಧನ್ಯರು. ಆದರೆ, ನಾವು ಇನ್ನೂ ಕಾನೂನು ಬಗ್ಗೆ ತಿಳಿದುಕೊಂಡಿಲ್ಲ. ದೇಶದ ಕಾನೂನನ್ನು ಯಾರೂ ಸ್ವಾರ್ಥಕ್ಕಾಗಿ ಬಳಸಿಕೊಳ್ಳಬಾರದು. ಸಾರ್ವಜನಿಕರು ಕಾನೂನನ್ನು ತಮ್ಮ ಸ್ವಾರ್ಥಕ್ಕೆ ಬಳಿಸಿಕೊಳ್ಳದೆ ಕಾನೂನು ಬದ್ಧವಾಗಿ ನಡೆದುಕೊಳ್ಳಬೇಕು. ಇಂತಹ ಬೃಹತ್ತಾದ ಸಂವಿಧಾನವನ್ನು ಮಹಾನಿಯರು ರಚನೆ ಮಾಡಿದ್ದಾರೆ. ಸಾರ್ವಜನಿಕರು ಜಗತ್ತನ್ನು ತಿದ್ದುವ ಬದಲು ನಮ್ಮನ್ನು ನಾವು ಮೊದಲು ತಿದ್ದಿಕೊಂಡು ಸಂವಿಧಾನವನ್ನು ಗೌರವಿಸಬೇಕು ಎಂದರು.

ಈ ಸಂದರ್ಭದಲ್ಲಿ ಕಿರಿಯ ಸಿವಿಲ್ ನ್ಯಾಯಾಧೀಶರಾದ ಬಿ.ಜೆ.ಶೋಭಾ, ವಕೀಲರ ಸಂಘದ ಅಧ್ಯಕ್ಷ ಕೆ.ಚಂದ್ರಗೌಡ್ರು, ಉಪಾಧ್ಯಕ್ಷ ಟಿ. ವೆಂಕಟೇಶ್, ಅಪರ ಸರ್ಕಾರಿ ವಕೀಲ ಕಣವಿಹಳ್ಳಿ ಮಂಜುನಾಥ್, ವಕೀಲರುಗಳಾದ ಚಿಗಟೇರಿ ವೀರಣ್ಣ, ಕೆ.ಉಚ್ಚೆಂಗೆಪ್ಪ, ಎಂ. ಮೃತಂಜಯ್ಯ, ಕೆಂಗಳ್ಳಿ ಪ್ರಕಾಶ್ ಸೇರಿದಂತೆ ಇತರರು ಇದ್ದರು.

# ಮೀಸಲಾತಿಗಾಗಿ ಪಂಚಮಸಾಲಿ ಸಮಾಜದ ಮಹಿಳೆಯರಿಂದ ಉಪವಾಸ ಸತ್ಯಾಗ್ರಹ

ದಾವಣಗೆರೆ, ಜ.26- ಪಂಚಮಸಾಲಿ ಸಮಾ ಜಕ್ಕೆ 2ಎ ಮೀಸಲಾತಿ ನೀಡುವಂತೆ ಆಗ್ರಹಿಸಿ ಕೂಡಲ ಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಬಸವ ಜಯ ಮೃತ್ಯುಂಜಯ ಸ್ವಾಮೀಜಿ ನಡೆಸುತ್ತಿರುವ ಪಾದಯಾತ್ರೆ ದಾವಣಗೆರೆ ಯಿಂದ ಮುಂದೆ ಸಾಗುವುದರೊಳಗೆ ಮುಖ್ಯಮಂತ್ರಿ ಗಳು ಸಮಾಜಕ್ಕೆ 2ಎ ಮೀಸಲಾತಿ ನೀಡಬೇಕು ಎಂದು ಅಖಿಲ ಭಾರತ ಪಂಚಮಸಾಲಿ ಮಹಿಳಾ ಸಂಘ (ಚೆನ್ನಮ್ಮ ಬಳಗ)ದ ರಾಜ್ಯಾಧ್ಯಕ್ಷೆ ಶ್ರೀಮತಿ ವೀಣಾ ಕಾಶೆಪ್ಪನವರ್ ಹಕ್ಕೊತ್ತಾಯ ಮಂಡಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಶ್ರೀಗಳ ಪಾದಯಾತ್ರೆ 289 ಕಿ.ಮೀ. ಕ್ರಮಿಸಿದೆ. ಪಾದಯಾತ್ರೆ ವೇಳೆ ಸಮಾಜದ ಮಹಿಳೆಯರು ಅಭೂತಪೂರ್ವ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಬೆಂಬಲ ಸೂಚಿಸುತ್ತಿದ್ದಾರೆ. ಮೀಸಲಾತಿ ನೀಡದೇ ಇದ್ದಲ್ಲಿ ರಾಣಿ ಚೆನ್ನಮ್ಮನ ಅಸ್ತ್ರವಾದ ಖಡ್ಗವನ್ನು ಪೂಜಿಸುವ ಮೂಲಕ ಬೆಂಗಳೂರು ವಿಧಾನಸೌಧದ ಬಳಿ ಸಮಾಜದ ಮಹಿಳೆಯರು ಒಂದು ದಿನದ ಉಪವಾಸ ಸತ್ಯಾಗ್ರಹ ನಡೆಸಲಿದ್ದಾರೆ ಎಂದು ಹೇಳಿದರು.

ಶೈಕ್ಷಣಿಕ ಹಾಗೂ ಉದ್ಯೋಗಕ್ಕಾಗಿ ಮೀಸಲಾತಿ ನೀಡಬೇಕಾಗಿರುವುದರಿಂದ ಯಾವು ದೇ ಅಧ್ಯಯ ನದ ಅಗತ್ಯವಿಲ್ಲ. ಮೀಸಲಾತಿ ಇಲ್ಲದ ಕಾರಣ, ಸಮಾಜದ ವಿದ್ಯಾರ್ಥಿಗಳು ಹೆಚ್ಚು ಅಂಕ ಪಡೆದರೂ ಉನ್ನತ ಹುದ್ದೆಗಳಿಂದ ವಂಚಿತರಾಗುತ್ತಿದ್ದಾರೆ. ಸಮಾ ಜದ ಬೆವರ ಹನಿಯಿಂದ ಯಡಿಯೂರಪ್ಪ ನವರು ಮುಖ್ಯ ಮಂತ್ರಿಯಾಗಿದ್ದಾರೆ. ಇದೀಗ ಸಮಾಜದ ಋಣ ತೀರಿಸುವ ವೇಳೆ ಬಂದಿದೆ ಎಂದು ಹೇಳಿದರು.

ಹಗರಿಬೊಮ್ಮನಹಳ್ಳಿಯಲ್ಲಿ ಪಾದಯಾತ್ರೆ ಯಲ್ಲಿ ಭಾಗವಹಿಸಿದ್ದ 63 ವರ್ಷದ ವೃದ್ಧರೊಬ್ಬರು ಹುತಾತ್ಮರಾಗಿದ್ದಾರೆ. ಇಂತಹ ಹುತಾತ್ಮರ ಸಂಖ್ಯೆ ಹೆಚ್ಚಾಗಲು ಸರ್ಕಾರ ಕಾರಣವಾಗಬಾರದು. ಇದೇ ದಿನಾಂಕ 28 ಹಾಗೂ 29 ರಂದು ಹರಿಹರ ಹಾಗೂ ದಾವಣಗೆರೆಗೆ ಪಾದಯಾತ್ರೆ ಆಗಮಿಸಲಿದ್ದು, ಪುರುಷರು ಬಾರುಕೋಲು ಹಾಗೂ ಸಾವಿರಾರು ಸಂಖ್ಯೆಯಲ್ಲಿ ಮಹಿಳೆಯರು ಕುರ್ಜಿಗೆ ಹಿಡಿದು ಮೆರವಣಿಗೆಯಲ್ಲಿ ಪಾಲ್ಗೊಂಡು ಮೀಸಲಾತಿಗಾಗಿ ಆಗ್ರಹಿಸಲಿದ್ದಾರೆ ಎಂದು ಹೇಳಿದರು.

ಈಗಾಗಲೇ ಹರಪನಹಳ್ಳಿಯಲ್ಲಿ ಸಮಾಜದ ಇಬ್ಬರೂ ಪೀಠಾಧಿಪತಿಗಳು ಒಂದಾಗಿದ್ದಾರೆ. ಸಮಾಜದಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಗೊಂದಲ ಸೃಷ್ಟಿಸುವ ಸಮಯವೂ ಇದಲ್ಲ ಎಂದು ವೀಣಾ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಲಕ್ಷ್ಮೀ ಕರಿಬಸಪ್ಪ, ಮಂಜುಳ, ವಿಜಯಾ ಮಹಾಂತೇಶ್, ಆಶಾ, ಮಂಜುಳಾ ಮಹೇಶ್, ಮಂಜುನಾಥ ಅಗಡಿ ಇತರರು ಉಪಸ್ಥಿತರಿದ್ದರು.

# ದಾವಣಗೆರೆ ಕ್ಲಬ್ ಚುನಾವಣೆ : 26 ಜನರ ಸ್ಪರ್ಧೆ

ದಾವಣಗೆರೆ,ಜ.26- ನಗರದ ಪ್ರತಿಷ್ಠಿತ ದಾವಣಗೆರೆ ಕ್ಲಬ್ ಆಡಳಿತ ಮಂಡಳಿಯ ಚುನಾವಣೆಯು ಇದೇ ದಿನಾಂಕ 31ರಂದು ನಡೆಯಲಿದ್ದು, ಪದಾಧಿಕಾರಿಗಳ ಒಟ್ಟು 11 ಸ್ಥಾನಗಳಿಗೆ 26 ಜನರು ಅಂತಿಮ ಕಣದಲ್ಲಿದ್ದಾರೆ.

ಅಧ್ಯಕ್ಷ ಸ್ಥಾನವನ್ನು ಬಯಸಿ ಸ್ಪರ್ಧೆ ಮಾಡಿರುವ ಕೈಗಾರಿಕೋದ್ಯಮಿ ಮತ್ತಿಹಳ್ಳಿ ವೀರಣ್ಣ ಮತ್ತು ಯು. ಜಿ. ಶಿವಕುಮಾರ್ ಅವರುಗಳ ನಡುವೆ ಪೈ ಪೋಟಿ ನಡೆದಿದ್ದು, ಅವರಿಬ್ಬರ ನೇತೃತ್ವದಲ್ಲಿ ಪ್ರತ್ಯೇಕ ಎರಡು ಗುಂಪುಗಳು 11 ಸ್ಥಾನಗಳಿಗೆ ಸ್ಪರ್ಧಿಸಿವೆ.

ಉಪಾಧ್ಯಕ್ಷ ಒಂದು ಸ್ಥಾನಕ್ಕೆ ಎ.ಬಿ. ಚಂದ್ರಶೇಖರ್, ಎ. ಜಯಪ್ಪ, ಐ.ವಿ.ವೀರಣ್ಣ ಸ್ಪರ್ಧಿಸಿದ್ದಾರೆ. ಗೌರವ ಕಾರ್ಯದರ್ಶಿಯ ಒಂದು ಸ್ಥಾನಕ್ಕೆ ರವಿಶಂಕರ್ ಪಲ್ಲಾಗಟ್ಟೆ, ಎಂ.ಕೆ. ರಾಜಶೇಖರ್ ನಡುವೆ ಸ್ಪರ್ಧೆ ನಡೆದಿದ್ದು, ಗೌರವ ಸಹ ಕಾರ್ಯದರ್ಶಿಯ ಒಂದು ಸ್ಥಾನಕ್ಕೂ ಎಸ್. ಜಿ.ಉಳುವಯ್ಯ ಮತ್ತು ಕೆ.ಬಿ.ನಾಗರಾಜ್ ನಡುವೆ ಸ್ಪರ್ಧೆ ಏರ್ಪಟ್ಟಿದೆ.

ಕೋಶಾಧ್ಯಕ್ಷ ಒಂದು ಸ್ಥಾನಕ್ಕೆ ಇಬ್ಬರು ಸ್ಪರ್ಧಿಸಿದ್ದಾರೆ. ಪುಟ್ಟಪ್ಪ ಕಾಶಿಪುರ ಮತ್ತು ಹೆಚ್.ಸಿ. ಲಿಂಗರಾಜ್ ವಾಲಿ ಈ ಸ್ಥಾನಕ್ಕೆ ಆಯ್ಕೆ ಬಯಸಿದ್ದಾರೆ.

ಆರು ನಿರ್ದೇಶಕರ ಸ್ಥಾನಗಳಿಗೆ 15 ಜನರಲ್ಲಿ ಸ್ಪರ್ಧೆ ನಡೆದಿದೆ. ಬಿ.ಜಿ. ಅಭಿಷೇಕ್, ಎ.ಎನ್. ಕೊಟ್ರೇಶ್, ಎನ್.ಜಿ. ಚನ್ನಬಸವನಗೌಡ, ಜಯರಾಜ್ ಎಸ್. ಕಶೆಟ್ಟರ್, ಎಸ್.ಕೆ. ತಿಮ್ಮರಾಜ ಗುಪ್ತಾ, ಬಿ.ಜಿ. ನಾಗರಾಜ್, ಎಸ್.ಕೆ. ಪ್ರಶಾಂತ್ ಗುಪ್ತಾ, ಪ್ರಕಾಶ್ ವಿ. ರಾಯ್ಕರ್, ಬಿ.ಪಿ. ಪಟೇಲ್, ಬೆಳ್ಳೂಡಿ ಸದಾನಂದ, ಮಲ್ಲಿಕಾರ್ಜುನ ಬಾದಾಮಿ, ಹೆಚ್.ವಿ. ರುದ್ರೇಶ್, ಆರ್.ಜಿ. ಶ್ರೀನಿವಾಸಮೂರ್ತಿ, ಬಿ.ವಿ. ಶಿವಯೋಗಿ, ಎನ್. ಸೋಮಶೇಖರ್ ಅವರುಗಳು ನಿರ್ದೇಶಕ ಸ್ಥಾನಗಳಿಗೆ ಸ್ಪರ್ಧಿಸಿದ್ದಾರೆ.

**ನಾಮಪತ್ರ ವಾಪಸ್ :** ಉಮೇದುವಾರಿಕೆ ಅರ್ಜಿಯನ್ನು ವಾಪಸ್ ಪಡೆಯಲು ಕೊನೆಯ ದಿನವಾಗಿದ್ದ ನಿನ್ನೆ 9 ಜನರು ತಮ್ಮ ನಾಮಪತ್ರವನ್ನು ಹಿಂದಕ್ಕೆ ಪಡೆದಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದವರಲ್ಲಿ ಬಾದಾಮಿ ಕರಿಬಸಪ್ಪ, ಹೆಚ್. ನಂಜುಂಡಪ್ಪ, ಪಿ.ಕೆ. ಶಿವಾನಂದಪ್ಪ ಅವರುಗಳು ತಮ್ಮ ಉಮೇದುವಾರಿಕೆ ಅರ್ಜಿ ವಾಪಸ್ ಪಡೆದರು.

ಅದೇ ರೀತಿ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಎನ್.ಎಂ. ಇಂದೂಧರ, ಗೌರವ ಸಹ ಕಾರ್ಯದರ್ಶಿ ಸ್ಥಾನದಿಂದ ಮಲ್ಲಿನಾಥ ಪುರಾಣಿಕ್, ನಿರ್ದೇಶಕ ಸ್ಥಾನದಿಂದ ಎ.ಎಂ. ಮೋಕ್ಷಾನಂದ, ರಘುನಂದನ್ ಜೆ. ಅಂಬರ್ ಕರ್, ವಿಶ್ವನಾಥ್ ಬಿ. ಪಾಟೀಲ್, ವೈ.ಬಿ. ಸತೀಶ್ ಅವರುಗಳು ತಮ್ಮ ನಾಮಪತ್ರವನ್ನು ವಾಪಸ್ ಪಡೆದರು.

ಎಸ್.ಎಂ. ವೀರಪ್ಪ ಚುನಾವಣಾಧಿಕಾರಿಯಾಗಿದ್ದಾರೆ.

# ನಗರದಲ್ಲಿಂದು ಸಂಧ್ಯಾವಂದನೆ ಶಿಬಿರ

ಅಖಿಲ ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ (ಬೆಂಗಳೂರು) ಮತ್ತು ಅಖಿಲ ಕರ್ನಾಟಕ ಅರ್ಚಕರು ಮತ್ತು ಪುರೋಹಿತರ ಸಂಘದ ವತಿಯಿಂದ ತ್ರಿಮತಸ್ಥ ಬ್ರಾಹ್ಮಣ ಬಂಧುಗಳಿಗೆ ಸಂಧ್ಯಾವಂದನೆ ಮತ್ತು ನಿತ್ಯ ದೇವತಾರ್ಚನೆ ಶಿಬಿರವನ್ನು ಇಂದಿನಿಂದ ಫೆಬ್ರವರಿ 15 ರವರೆಗೆ ಪ್ರತಿದಿನ ಸಂಜೆ 5.30 ರಿಂದ 6.30 ರವರೆಗೆ ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿರುವ ಕೂಡಲಿ ಶಂಕರ ಮಠದಲ್ಲಿ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಪಾಲ್ಗೊಳ್ಳಲು ವಯಸ್ಸಿನ ಮಿತಿ ಇರುವುದಿಲ್ಲ ಎಂದು ಪುರೋಹಿತರ ಸಂಘದ ಅಧ್ಯಕ್ಷ ಪವನ್ ಕುಮಾರ್ ಭಟ್ (9886212889, 9611165426) ತಿಳಿಸಿದ್ದಾರೆ.

# ನಗರದಲ್ಲಿ ನಾಳೆ ಉದ್ಯೋಗ ಮೇಳ

ದಾವಣಗೆರೆ, ಜ.26- ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಹಾಗೂ ಎಆರ್‌ಜಿ ಕಲಾ ಮತ್ತು ವಾಣಿಜ್ಯ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ನಾಡಿದ್ದು ದಿನಾಂಕ 28 ಬೆಳಿಗ್ಗೆ 10 ಗಂಟೆಗೆ ಎಆರ್‌ಜಿ ಕಾಲೇಜಿನಲ್ಲಿ ಉದ್ಯೋಗ ಮೇಳ ನಡೆಯಲಿದೆ. ಉದ್ಯೋಗ ಮೇಳದಲ್ಲಿ ಹಲವು ಖಾಸಗಿ ಕಂಪನಿಗಳು ಭಾಗವಹಿಸುತ್ತಿದ್ದು, ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೋಮಾ, ಪದವಿ, ಸ್ನಾತಕೋತ್ತರ ಪದವಿ ಪಡೆದ ಆಸಕ್ತ ಅಭ್ಯರ್ಥಿಗಳು ಅಂದು ಬಯೋಡೇಟಾ ಮತ್ತು ಆಧಾರ್ ಕಾರ್ಡ್‌ನ ಹತ್ತು ಪ್ರತಿಗಳೊಂದಿಗೆ ಭಾಗವಹಿಸುವಂತೆ ಉದ್ಯೋಗಾಧಿಕಾರಿ ಕೆ.ಎಸ್. ಗಿರೀಶ್ ತಿಳಿಸಿದ್ದಾರೆ. ವಿವರಗಳಿಗೆ ಸಂಪರ್ಕಿಸಿ : ದೂರವಾಣಿ 08192-259446, 63615 50016, 97436 63369.

# ಅಭಾವಿಪದಿಂದ ಲಸಿಕೆ ಜಾಗೃತಿ

ದಾವಣಗೆರೆ, ಜ.26- ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ದಾವಣಗೆರೆ ವತಿ ಯಿಂದ ಭಾರತದಲ್ಲಿ ಅಭಿವೃದ್ಧಿಪ ಡಿಸಿರುವ ಕೋವ್ಯಾಕ್ಸಿನ್ ಹಾಗೂ ಕೋವಿಶೀಲ್ಡ್ ಲಸಿಕೆಗಳ ವಿರುದ್ಧ ದೇಶ ವಿರೋಧಿ ಶಕ್ತಿಗಳಿಂದ ನಡೆಯುತ್ತಿರುವ ಅಪಪ್ರಚಾರದ ಕುರಿತು ಪ್ರಾಂಶುಪಾಲರು, ಪೊಲೀಸರಿಂದ ಐ ಟ್ರಸ್ಟ್ ಮೈ ವ್ಯಾಕ್ಸಿನ್-ಟ್ರಸ್ಟ್ ಯುವರ್ ವ್ಯಾಕ್ಸಿನ್ ಪೋಸ್ಟರ್ ಬಿಡುಗಡೆ ಮಾಡಿ ಜನರಲ್ಲಿ ವಿಶ್ವಾಸ ಮೂಡಿಸಲಾಯಿತು. ದಾವಣಗೆರೆ ಅಧ್ಯಕ್ಷ ಪವನ್ ರೇವಣಕರ್, ರಾಜ್ಯ ಸದಸ್ಯ ಶರತ್, ನಗರ ಕಾರ್ಯದರ್ಶಿ ಭಾರ್ಗವ, ಹಾಸ್ಟೆಲ್ ಪ್ರಮುಖ ರವಿ, ನಗರ ವಿದ್ಯಾರ್ಥಿನಿ ಪ್ರಮುಖ್ ಮಾನಸ, ಲಕ್ಷ್ಮಿ, ಹೋರಾಟ ಪ್ರಮುಖ ವಿಜಯ ಉಪಸ್ಥಿತರಿದ್ದರು.

# 29ರಂದು ನಗರಕ್ಕೆ ಕೂಡಲ ಸಂಗಮ ಶ್ರೀಗಳ ಪಾದಯಾತ್ರೆ ಆಗಮನ

## ಸ್ವಾಗತಕ್ಕೆ ಸಿದ್ಧತೆ, ಇಬ್ಬರೂ ಪೀಠಾಧಿಪತಿಗಳು ಭಾಗಿ

ದಾವಣಗೆರೆ,ಜ.26- 2ಎ ಮೀಸಲಾತಿಗಾಗಿ ಕೂಡಲ ಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಬಸವ ಜಯ ಮೃತ್ಯುಂಜಯ ಸ್ವಾಮೀಜಿ ನಡೆಸುತ್ತಿರುವ ಪಾದಯಾತ್ರೆ ಇದೇ ದಿನಾಂಕ 29 ರಂದು ನಗರಕ್ಕೆ ಆಗಮಿಸಲಿದ್ದು, ಸ್ವಾಗತಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಸ್ವಾಗತ ಸಮಿತಿ ಗೌರವಾಧ್ಯಕ್ಷ ಹೆಚ್.ಎಸ್. ನಾಗರಾಜ್ ಹೇಳಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪಿ.ಬಿ. ರಸ್ತೆಯ ಸಂಗೊಳ್ಳಿ ರಾಯಣ್ಣ ವೃತ್ತದಲ್ಲಿ ಮಧ್ಯಾಹ್ನ 3 ಗಂಟೆಗೆ ಪಾದಯಾತ್ರೆಗೆ ಸ್ವಾಗತಿಸಲಾಗು ವುದು. ಸಂಜೆ 4 ಗಂಟೆಗೆ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಸಮಾವೇಶ ನಡೆಯಲಿದೆ.

ಸಮಾವೇಶದಲ್ಲಿ ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರುಗಳು ಶ್ರೀ ವಚನಾ ನಂದ ಸ್ವಾಮೀಜಿ, ಬಸಸವನಗೌಡ ಪಾಟೀಲ ಯತ್ನಾಳ್, ಪಂಚಮಸಾಲಿ ಟ್ರಸ್ಟಿನ ಧರ್ಮದರ್ಶಿ ಬಿ.ಸಿ. ಉಮಾ ಪತಿ, ಸಮಾಜದ ಮುಖಂಡರಾದ ಬಿ.ಲೋಕೇಶ್, ದೊಡ್ಡಪ್ಪ, ಸೋಮಣ್ಣ ಬೇವಿನಮರದ, ವಿಜಯಾನಂದ ಕಾಶಂಪುರ, ನಂದಿಹಳ್ಳಿ ಹಾಲಪ್ಪ ಇತರರು ಭಾಗವಹಿಸಲಿದ್ದಾರೆ ಎಂದರು.

ಸಮಾಜದಲ್ಲಿ ಯಾವುದೇ ಗೊಂದಲ ಇರದಿದ್ದರೂ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಅವರ ಸ್ವಾರ್ಥಕ್ಕೆ ಸಮಾಜವನ್ನು ಇಬ್ಭಾಗ ಮಾಡಲು ಯತ್ನಿಸುತ್ತಿದ್ದಾರೆ. ಹರಪನಹಳ್ಳಿಯಲ್ಲಿ ಎರಡೂ ಪೀಠದ ಶ್ರೀಗಳು ಒಂದಾಗಿ ಪಟ್ಟಭದ್ರ ಹಿತಾಸಕ್ತಿಗಳ ಕಾಯಕ್ಕೆ ಇತಿಶ್ರೀ ಹಾಡಲಾಗಿದೆ. ಎರಡೂ ಪೀಠಗಳು ಒಂದಾಗಿವೆ. ಒಂದಾಗಿಯೇ ಇರ ಲಿವೆ. ಮೀಸಲಾತಿಗಾಗಿ ಎರಡೂ ಪೀಠದ ಜಗದ್ಗುರುಗಳು ಹೋರಾಟ ನಡೆಸಲಿದ್ದಾರೆ ಎಂದು ಹೇಳಿದರು.

ಸಮಾಜದ ಮುಖಂಡಾರದ ಪ್ರಭು ಕಲಬುರ್ಗಿ, ವೀಣಾ ಕಾಶೆಪ್ಪನವರ್, ಬಶೆಟೆಪ್ಪ, ಮಂಜುಳಾ ಮಹೇಶ್, ಬಾತಿ ನಾಗರಾಜ್, ಹದಡಿ ರವಿ, ತಣಿಗೇರಿ ಶಿವಕುಮಾರ್, ಮೇಗಳಗೆರೆ ಚನ್ನಬಸಪ್ಪ, ಮಂಜುನಾಥ ಅಗಡಿ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಶ್ರೀ ವೀರಭದ್ರೇಶ್ವರ ದೇವಸ್ಥಾನ ಪುಣ್ಯಕ್ಷೇತ್ರವಾಗಿ ಹೊರ ಹೊಮ್ಮಲಿ

## ಮಲೇಬೆನ್ನೂರಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಆಶಯ



ಮಲೇಬೆನ್ನೂರು ಜ.26 - ಪಟ್ಟಣದ ಹೊರವಲಯದಲ್ಲಿ ನಿರ್ಮಾಣಗೊಂಡು ಲೋಕಾರ್ಪಣೆಗೆ ಸಿದ್ದಗೊಳ್ಳುತ್ತಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನಕ್ಕೆ ಮಂಗಳವಾರ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ, ಶಿವಮೊಗ್ಗ ಸಂಸದ ಬಿ.ವೈ. ರಾಘವೇಂದ್ರ ಅವರು ಭೇಟಿ ನೀಡಿ ವೀಕ್ಷಿಸಿದರು.

ಗ್ರಾಮೀಣ ಪ್ರದೇಶದಲ್ಲಿ ಹೆದ್ದಾರಿಗೆ ಹೊಂದಿ ಕೊಂಡಂತೆ ವಿಶಾಲವಾದ ಜಾಗದಲ್ಲಿ ನಿರ್ಮಾಣ ಗೊಂಡಿರುವ ಈ ದೇವಸ್ಥಾನ ಮುಂದೊಂದು ದಿನ ಪುಣ್ಯಕ್ಷೇತ್ರವಾಗಿ ಹೊರ ಹೊಮ್ಮಲಿದೆ ಎಂದು ಭೈರತಿ ಬಸವರಾಜ ಹೇಳಿದರು.

ದೇವಸ್ಥಾನದ ಕಾಮಗಾರಿ ಪೂರ್ಣಗಳಿಸಲು ಅಗತ್ಯವಿರುವ ಸೌಲಭ್ಯಗಳನ್ನು ಕಲ್ಪಿಸುವ ಸಂಬಂಧ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಜೊತೆ ಚರ್ಚಿಸಿ, ಅನುದಾನ ನೀಡುವಂತೆ ಮನಿ ಮಾಡುವುದಾಗಿ ಸಂಸದ ರಾಘವೇಂದ್ರ ಭರವಸೆ ನೀಡದರು.

ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಇಲ್ಲಿ ವೀರಭದ್ರೇಶ್ವರ ಸೇರಿದಂತೆ ಇತರೆ ದೇವರುಗಳ ಕ್ಷೇತ್ರ ನಿರ್ಮಾಣ ಆಗಿರುವುದು ಸಂತೋಷದ ವಿಷಯ ಎಂದು ಎಂ.ಪಿ ರೇಣುಕಾಚಾರ್ಯ ಮೆಚ್ಚುಗೆ ವ್ಯಕ್ತಪಡಿಸಿದರು.

ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಮಾತನಾಡಿ, ಕುಮಾರ ಸ್ವಾಮಿ ಅವರು ಸಿಎಂ ಆಗಿದ್ದಾಗ ಬಜೆಟ್‌ನಲ್ಲಿ ಈ ದೇವಸ್ಥಾನದ ಅಭಿ ವೃದ್ಧಿಗೆ 1 ಕೋಟಿ ರೂ. ಅನುದಾನ ಘೋಷಿಸಿ ದ್ದರು. ಆದರೆ, ಆ ಹಣ ಇನ್ನೂ ಬಿಡುಗಡೆ ಆಗಿಲ್ಲ. ಸಚಿವರು, ಸಂಸದರು ಆ 1 ಕೋಟಿ ರೂ. ಅನುದಾನ ನೀಡಬೇಕೆಂದು ಮನವಿ ಮಾಡಿದರು.

ಜವಳಿ ವರ್ತಕ ಬಿ.ಸಿ. ಉಮಾಪತಿ ಮಾತನಾಡಿ, ಈ ದೇವಸ್ಥಾನ ನಿರ್ಮಾಣಕ್ಕೆ ಬಹಳಷ್ಟು ಜನ ವೈಯುಕ್ತಿಕ ನೆರವು ನೀಡಿದ್ದಾರೆ ನಾನು ಕೂಡ 50 ಲಕ್ಷ ರೂ ದೇಣಿಗೆ ನೀಡಿದ್ದು, ಇನ್ನೂ ಬಳಷ್ಟು ಹಣದ ಅವಶ್ಯಕತೆ ಇದ್ದು, ಸರ್ಕಾರ ಗಮನ ಹರಿಸಬೇಕೆಂದರು. ಜೆಡಿಎಸ್ ಜಿಲ್ಲಾಧ್ಯಕ್ಷರೂ, ದೇವಸ್ಥಾನ ಕಮಿಟಿಯ ಸದಸ್ಯರೂ ಆದ ಬಿ.ಚಿದಾನಂದಪ್ಪ ಮಾತನಾಡಿ, ಸುಮಾರು 25-30 ಕೋಟಿ ರೂ.ಗಳ ವೆಚ್ಚದಲ್ಲಿ ಈ ಕ್ಷೇತ್ರ ಅಭಿವೃದ್ದಿ ಪಡಿಸಿದ್ದು, ಇದು ಸರ್ವ ಜನರ ಹಿತ ಕಾಯುವ ಸನ್ನಿಧಿ ಆಗಬೇಕೆಂದು ನಮ್ಮ ಆಶಯವಾಗಿದೆ ಎಂದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿ.ಪಂ ಸಿಇಓ ಪದ್ಮ ಬಸವಂತಪ್ಪ, ಎಎಸ್ಪಿ ರಾಜೀವ್, ವಿಭಾಗಧಿಕಾರಿ ಮಮತಾ ಹೊಸ ಗೌಡರ್, ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಉಪ ತಹಶೀಲ್ದಾರ್ ಆರ್.ರವಿ, ಪಿಎಸ್‌ಐ ವೀರಬಸಪ್ಪ, ಎಪಿಎಂಸಿ ಸದಸ್ಯ ಜಿ. ಮಂಜುನಾಥ್ ಪಟೇಲ್, ಬಂಡೇರ ತಿಮ್ಮಣ್ಣ, ಕರ್ನಾಟಕ ಆರ್ಯ ವೈಶ್ಯ ಮಂಡಳಿ ಅಧ್ಯಕ್ಷ ಡಿ. ಎಸ್.ಅರುಣ್, ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಮುರುಗೇಶ್ ಆರಾಧ್ಯ, ಯಕ್ಕನಹಳ್ಳಿ ಬಸವರಾಜಪ್ಪ, ಕುಂದೂರು ಶಿವಣ್ಣ, ನಿಟ್ಟೂರು ಸಂಜೀವಮೂರ್ತಿ, ಮಾಗಾನಹಳ್ಳಿ ಹಾಲಪ್ಪ, ಎನ್.ಕೆ. ವೃಷಭೇಂದ್ರಪ್ಪ, ಎನ್.ಕೆ ಬಸವರಾಜ್, ಬಿ.ಮಹಾರುದ್ರಪ್ಪ, ಬಿ.ಶಂಭು ಲಿಂಗಪ್ಪ, ಬಿ.ಮಲ್ಲಿಕಾರ್ಜುನ್, ಬಿ.ವಿ.ಸುರೇಶ್, ಹೊನ್ನಾಳಿ ಗಂಗಾಧರ್ ಮತ್ತಿತ್ತರರು ಉಪಸ್ಥಿತರಿದರು.



# ಬ್ರಾಹ್ಮಣರಿಗೆ ಶೇ. 10 ಮೀಸಲಾತಿ ನೀಡಲು ಸರ್ಕಾರದ ಭರವಸೆ

ದಾವಣಗೆರೆ, ಜ.26- ರಾಜ್ಯದಲ್ಲಿ ಬ್ರಾಹ್ಮಣರಿಗೆ ಶೇ.10ರಷ್ಟು ಮೀಸಲಾತಿ ಜಾರಿಗೆ ತರಬೇಕೆಂಬ ಮನವಿಗೆ ಸ್ಪಂದಿಸಿರುವ ಕಂದಾಯ ಸಚಿವ ಆರ್.ಅಶೋಕ್ ಅವರು ಮುಂದಿನ ಸಚಿವ ಸಂಪುಟದಲ್ಲಿ ಅನುಮೋದಿಸುವುದಾಗಿ ಭರವಸೆ ನೀಡಿರುವುದಾಗಿ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ನಿರ್ದೇಶಕ ಪಿ.ಸಿ.ಶ್ರೀನಿವಾಸ್ ತಿಳಿಸಿದರು.

ನಗರದ ಕೂಡಲೀ ಶಂಕರ ಮಠದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಅರ್ಚಕರ ಮತ್ತು ಪುರೋಹಿತರ ಪರಿಷತ್ ಜಿಲ್ಲಾ ಕಾರ್ಯಕಾರಿಣಿ ಸಮಿತಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣೆ ವೇಳೆ ಘೋಷಿಸಿದ್ದ ಶೇ.10ರಷ್ಟು ಮೀಸಲಾತಿ ಮಹಾರಾಷ್ಟ್ರ, ಉತ್ತರಪ್ರದೇಶ, ಮಧ್ಯಪ್ರದೇಶ ಸೇರಿ 9 ರಾಜ್ಯಗಳಲ್ಲಿ ಘೋಷಣೆಯಾಗಿದೆ. ರಾಜ್ಯದಲ್ಲೂ ಮೀಸಲಾತಿ ಜಾರಿಗೆ ತರುವಂತೆ ಕಂದಾಯ ಸಚಿವ ಆರ್. ಅಶೋಕ್ ಅವರಿಗೆ ಮನವಿ ಸಲ್ಲಿಸಲಾಗಿತ್ತು ಎಂದು ಹೇಳಿದರು.



23 ಜಿಲ್ಲೆಗಳಲ್ಲಿ ಪುರೋಹಿತರ ಪರಿಷತ್ ಸಭೆಗಳು ಸ್ಥಾಪನೆಯಾಗಿವೆ. ಬ್ರಾಹ್ಮಣ ಮಂಡಳಿಯಿಂದ 22 ಯೋಜನೆ ಗಳನ್ನು ಜಾರಿಗೆ ತರಲು ಉದ್ದೇಶಿಸಿದ್ದು, ಅವುಗಳಲ್ಲಿ 8 ಯೋಜನೆಗಳಿಗೆ ಈಗಾಗಲೇ ಚಾಲನೆ ನೀಡಲಾಗಿದೆ ಎಂದರು.

ನಗರ ಡಿವೈಎಸ್‌ಪಿ ಯು. ನಾಗೇಶ್ ಐತಾಳ್ ಮಾತನಾಡಿ, ಇಂದಿನ ದಿನಗಳಲ್ಲಿ ಅರ್ಚಕರು ಸಂಕಷ್ಟದಲ್ಲಿ ಇದ್ದು, ಅದರಲ್ಲೂ ಕೋವಿಡ್ ಸಮಯದಲ್ಲಿ ಹಲವು ಸಮಸ್ಯೆಗಳನ್ನು ಎದುರಿಸಿದ್ದಾರೆ. ಸಮಾಜ ಹಾಗೂ ಸಂಘಟನೆಗಳು ಅವರನ್ನು ಮೇಲೆತ್ತುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಉಪಾಧ್ಯಕ್ಷ ಜಯತೀರ್ಥಾಚಾರ್ ವಡೇರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಜಿಲ್ಲಾಧ್ಯಕ್ಷ ಪವನಕುಮಾರ್ ಕುಲಕರ್ಣಿ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಸಮಿತಿ ಸಂಘಟನಾ ಕಾರ್ಯದರ್ಶಿ ಪಿ. ರಮೇಶ್ ಜೋಯ್ಸ್, ಖಜಾಂಚಿ ಎಂ.ಬಿ. ಪ್ರದೀಪ್ ಭಟ್, ಜಿಲ್ಲಾ ಬ್ರಾಹ್ಮಣ ಸಮಾಜದ ಅಧ್ಯಕ್ಷ ಡಾ. ಬಿ.ಟಿ. ಅಚ್ಯುತ್, ತಾಲ್ಲೂಕು ಬ್ರಾಹ್ಮಣ ಸಮಾಜದ ಅಧ್ಯಕ್ಷ ಸತ್ಯನಾರಾಯಣ ರಾವ್, ನೇತ್ರ ತಜ್ಞ ಡಾ. ಮೋಹನ್ ನಾಡಿಗೇರ್, ಕಾರ್ಯದರ್ಶಿ ಡಿ. ಚಿದಂಬರ ಮೂರ್ತಿ, ಖಜಾಂಚಿ ಸುಬ್ಬಣ್ಣಾಚಾರ್ ವಡೇರ್, ಜಂಟಿ ಕಾರ್ಯದರ್ಶಿ ಶ್ರೀಪಾದ ದೇಶಪಾಂಡೆ, ನಿರ್ದೇಶಕರುಗಳಾದ ನಾರಾಯಣ ಡಿ. ಜೋಶಿ, ಕೆ.ಎಸ್. ಪ್ರಸನ್ನಾಚಾರ್, ಕೆ.ಬಿ. ಶರ್ಮಾ ಸೇರಿದಂತೆ ಇತರರು ಇದ್ದರು.


ಹಿರಿಯ ಸಲಹೆಗಾರ ಡಾ. ಸಿ.ಕೆ. ಆನಂದತೀರ್ಥಾಚಾರ್ ನಿರೂಪಿಸಿದರು. ರಂಗನಾಥ್ ನಾಡಿಗೇರ್ ಸ್ವಾಗತಿಸಿದರು.










JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte